ಅಹರ್ನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ



ಹಿಂದೂ ಸ್ವಯಂಸೇವಕ ಸಂಘ, ಆಸ್ಟ್ರೇಲಿಯಾ ರಾಷ್ಟ್ರೀಯ ಸಂಘ ಶಿಕ್ಷಾ ವರ್ಗವನ್ನು ಪಶ್ಚಿಮ ಆಸ್ಟ್ರೇಲಿಯಾದ ಪರ್ತ್‌ನಲ್ಲಿ ಏಪ್ರಿಲ್ 8 ರಿಂದ 16ರವರೆಗೆ ಆಯೋಜಿಸಿತು. ಸುಮಾರು 200 ಮಂದಿ ಶಿಕ್ಷಾರ್ಥಿಗಳು ಭಾಗವಹಿಸಿದ್ದರು.

ಸಂಪುಟ : 45 | ಸಂಚಿಕೆ : 3 | ವೈಶಾಖ–ಜ್ಯೇಷ್ಠ | ಕಲಿಯುಗಾಬ್ದ 5125 | 15–05–2023 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

## ಸಮಾಜದಲ್ಲಿದ್ದ ಕಲ್ಮಶಗಳನ್ನು ಕಳೆದು, ಸಾಮಾಜಿಕ ಸಾಮರಸ್ಯದ ಬೆಳಕನ್ನು ಬೆಳಗಿದ ಸಾವರ್ಕರ್

ನಾಯಕರು ಇಂದು ಕಾಣಬಲ್ಲ ಸತ್ಯವನ್ನು ಜಾತಿ, ಧರ್ಮ, ಜನಾಂಗಗಳಿಗೆ ಅರ್ಥವಾಗಲು ನೂರಾರು ವರ್ಷಗಳೇ ಬೇಕು. ಅಂತಹ ನಾಯಕರು ಹೇಳುವ ದೊಡ್ಡ ಸತ್ಯವನ್ನು ತಕ್ಷಣಕ್ಕೆ ಅರಗಿಸಿಕೊಳ್ಳುವ ಧಾರಣಾಶಕ್ತಿಯು ಜನ ಸಮುದಾಯಗಳಿಗೆ ಇರುವುದಿಲ್ಲ ಎನ್ನುವ ಪ್ರಾಜ್ಞರ ನುಡಿಗೆ ಸಾವರ್ಕರ್ ಜೀವನ ಅತ್ಯಂತ ಉತ್ತಮ ನಿದರ್ಶನ. ಸಾವರ್ಕರ್ ಅವರನ್ನು ಅಂದೂ, ಇಂದೂ ರಾಜಕೀಯವಾಗಿ, ಸೈದ್ಧಾಂತಿಕವಾಗಿ ಹಾಗೂ ಇನ್ನಿತರ ಕಾರಣಗಳಿಗಾಗಿ ಕಡೆಗಣಿಸುವ ಪ್ರಯತ್ನ ನಡೆಯುತ್ತಲೇ ಇದೆ. ಸಾವರ್ಕರ್ ಅವರ ದೇಹಾಂತ್ಯವಾಗಿ ಎರಡು ದಶಕಗಳ ನಂತರ ಅವರ ಚಿಂತನೆಗಳು ಮುನ್ನೆಲೆಗೆ ಬಂದು, ಇಂದು ಹಲವು ವಿವಾದಗಳ ಮೂಲಕ ರಾಷ್ಟ್ರವ್ಯಾಪಿ ಸುದ್ದಿಯಾಗುತ್ತಿದೆ. ಆದರೆ ಇಂತಹ ವಿವಾದಗಳು ಜನಸಾಮಾನ್ಯರಿಗೆ ಸಾವರ್ಕರ್ ಅವರ ಬದುಕಿನ ಕುರಿತಾಗಿ ಚಿಂತನ–ಮಂಥನ ನಡೆಸುವುದಕ್ಕೆ ಸಹಕಾರಿಯಾಗಿದ್ದಂತೂ ಸುಳ್ಳಲ್ಲ. ಅದರ ಪರಿಣಾಮವಾಗಿಯೇ ಸಾಮಾಜಿಕ ಸಾಮರಸ್ಯಕ್ಕಾಗಿ ಸಾವರ್ಕರ್ ಅವರ ಕೊಡುಗೆಗಳೇನು ಎನ್ನುವುದೂ ಜಗಜ್ಜಾಹೀರಾಗಿದೆ.

ನಮ್ಮ ನಾಡಿನ ಮಹಾನ್ ಪುರುಷರ ಕುರಿತು ಅಧ್ಯಯನ ಮಾಡಿದಾಗ ಸಮಾಜ ಸುಧಾರಣೆ ಮತ್ತು ಸ್ವಾತಂತ್ರ್ಯ ಹೋರಾಟ ಎರಡರಲ್ಲೂ ಸಮಾನವಾಗಿ ತೊಡಗಿಕೊಂಡವರು ಸಿಗುವುದು ಬಹಳ ವಿರಳ. ಅಂತಹ ವಿರಳ ಮಹಾನ್ ಪುರುಷರಲ್ಲಿ ವೀರ ಸಾವರ್ಕರ್ ಪ್ರಮುಖರು. ತಮ್ಮ ಕಠಿಣ ಶಿಕ್ಷೆ ಮತ್ತು ಗ್ರಾಮ ಬಂಧನದ ತರುವಾಯ ಮಿಂಚಿನ ವೇಗದಲ್ಲಿ ರಾಷ್ಟ್ರವ್ಯಾಪಿ ಸಂಚಾರ ಮಾಡಿ ಭಾರತೀಯರ ಸ್ವಾಭಿಮಾನ ಜಾಗೃತಿಯ ಕೆಲಸ ಮಾಡಿದರು. ಮಹಾರಾಷ್ಟ್ರದಲ್ಲಿದ್ದ ಸ್ಪರ್ಶ ಬಂಧಿ, ರೋಟಿ ಬಂಧಿ, ಬೇಟಿ ಬಂಧಿ, ವ್ಯವಸಾಯ ಬಂಧಿ, ಸಿಂಧೂ ಬಂಧಿ, ವೇದೋಕ್ತಿ ಬಂಧಿ, ಶುದ್ಧಿ ಬಂಧಿ ಎಂಬ ಏಳು ಬಂಧನಗಳ ವಿರುದ್ಧ ಸಿಡಿದೆದ್ದರು.

**ಸ್ಪರ್ಶ ಬಂಧಿ:** ಅಸ್ಪೃಶ್ಯತೆಯನ್ನು ತೊಲಗಿಸಲು ಕೆಲಸ ಮಾಡಿದ ದಿಗ್ಗಜರ ಸಾಲಿಗೆ ಸಾವರ್ಕರರು ಅರ್ಹರಾಗಿಯೇ ಸೇರುತ್ತಾರೆ. ಅದುವರೆಗೂ ಜಾತಿ ಪದ್ಧತಿಯನ್ನು ಹೀಗಳೆದೇ ಸಮಾಜ ಪರಿವರ್ತನೆಯ ಕುರಿತು ಮಾತನಾಡಿದವರಿದ್ದಾಗ ಜಾತಿ ವ್ಯವಸ್ಥೆ ತಪ್ಪಲ್ಲ, ಜಾತಿ ಭೇದ ತಪ್ಪು ಎಂಬ ನೂತನ ಚಿಂತನೆಯನ್ನು ಮುಂದಿಟ್ಟಿದ್ದಲ್ಲದೆ, ಮೇಲ್ವರ್ಗದವರೆಂದು ಕರೆಸಿಕೊಳ್ಳುವವರು ದೀನ–ದುರ್ಬಲ ವರ್ಗದವರ ಉನ್ನತಿಗಾಗಿ ಶ್ರಮಿಸಬೇಕು ಮತ್ತು ತಮ್ಮನ್ನು ತಾವು ಕೀಳು ಎಂದು ಅಂದುಕೊಳ್ಳುವ ಮನಸ್ಥಿತಿ ದಲಿತರಿಂದ ದೂರವಾಗಬೇಕು ಎಂದು ಪರಿಹಾರವನ್ನೂ ಹೇಳಿದರು. ಅದರ ಜೊತೆಗೆ ಪತಿತ ಪಾವನ ಮಂದಿರ ನಿರ್ಮಾಣ, ವಿಠೋಬ ಮಂದಿರ ಪ್ರವೇಶ, ಅರಶಿಣ ಕುಂಕುಮ ಕಾರ್ಯಕ್ರಮ, ಅಂತರ್ಜಾತಿ ವಿವಾಹದಂತಹ ಕಾರ್ಯಗಳಲ್ಲಿ ತೊಡಗಿಕೊಂಡರು. ಸಾರ್ವಜನಿಕ ಗಣೇಶೋತ್ಸವದಲ್ಲಿ ಮೊದಲ ಬಾರಿಗೆ ಎಲ್ಲಾ ವರ್ಗದ ಜನರು ಸಮಾನವಾಗಿ ಭಾಗವಹಿಸುವಿಕೆಗೆ ಅವಕಾಶ ಕಲ್ಪಿಸಿದ್ದು, ಸಾರ್ವಜನಿಕ ಸಹಪಂಕ್ತಿ ಭೋಜನ ಆಂದೋಲನ, ಅಸ್ಪೃಶ್ಯರೆಂದು ಜನರು ಕರೆಯುತ್ತಿದ್ದವರಿಂದ ಹೊಟೇಲ್ ನಿರ್ಮಿಸಿ ಸಾಮಾಜಿಕ ಸಾಮರಸ್ಯಕ್ಕೆ ಮುನ್ನುಡಿ ಬರೆದಿದ್ದೆಲ್ಲವೂ ಸಮಾಜದ ಏಕತೆಗಾಗಿ ಅವರು ನೀಡಿದ ಕೊಡುಗೆ.



**ರೋಟಿ ಬಂಧಿ:** ಆಹಾರದ ವಿಷಯದಲ್ಲಿ ಭೇದವನ್ನು ಮಾಡುತ್ತಿದ್ದವರಿಗೆ "ಯಾವುದೇ ಧರ್ಮದ ಸ್ಥಾನ ಹೃದಯ, ಹೊಟ್ಟೆಯಲ್ಲ" ಎಂದು ಸಾವರ್ಕರ್ ಉತ್ತರ ನೀಡಿದ್ದರು. ಅಷ್ಟೇಯಲ್ಲದೇ ಯಾರನ್ನು ಅಸ್ಪೃಶ್ಯರೆಂದು ಅಂದಿನ ಸಮಾಜ ದೂರವಿಟ್ಟಿತ್ತೋ ಅವರ ಮೂಲಕವೇ ಹೊಟೇಲೊಂದನ್ನು ತೆರೆದು, ಸಮಾಜದ ಎಲ್ಲಾ ವರ್ಗದವರೂ ದಲಿತರು ಮಾಡಿದ ಅಡುಗೆಯನ್ನು ಒಟ್ಟಿಗೆ ಕೂತು ಊಟ ಮಾಡುವ ವ್ಯವಸ್ಥೆಯನ್ನು ಹೊಟೇಲ್‌ನಲ್ಲಿ ತಂದರು.

**ಬೇಟಿ ಬಂಧಿ:** ಅಂತರ್ಜಾತಿ ವಿವಾಹ ಮತ್ತು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಇದ್ದ ವಿರೋಧಗಳ ವಿರುದ್ಧ ನಿಂತು ಅಂತರ್ಜಾತಿ ವಿವಾಹವನ್ನು ಮತ್ತು ಹೆಣ್ಣು ಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸಿ ಹಲವು ಕಾರ್ಯಕ್ರಮಗಳನ್ನು ಅವರ ನೇತೃತ್ವದಲ್ಲಿ ನಡೆಸಿದರು.

**ವ್ಯವಸಾಯ ಬಂಧಿ:** ತಮ್ಮ ಕುಲಕಸುಬನ್ನೇ ವೃತ್ತಿಯನ್ನಾಗಿಸಿಕೊಳ್ಳಬೇಕು ಎಂದು ಉದ್ಯೋಗದ ಹೆಸರಿನಲ್ಲಿ ಇದ್ದ ಸಂಕುಚಿತತೆಯನ್ನು ದೂರ ಮಾಡುವ ಸಲುವಾಗಿ ತಾನು ಯಾವ ಉದ್ಯೋಗವನ್ನು ಮಾಡಬೇಕು ಎನ್ನುವುದು ವೈಯಕ್ತಿಕ ನಿರ್ಧಾರ ಎನ್ನುವುದನ್ನು ಸಾರಿದರು. ತಮ್ಮ ಪ್ರತಿಭೆ, ಅರ್ಹತೆ ಮತ್ತು ಸ್ವಭಾವದ ಆಧಾರದ ಮೇಲೆ ಬಯಸಿದ ಉದ್ಯೋಗವನ್ನು ಮಾಡುವ ಸ್ವಾತಂತ್ರ್ಯ ಪ್ರತಿಯೊಬ್ಬರಿಗೂ ನೀಡಬೇಕು. ಇದೇ ವೃತ್ತಿಯನ್ನು ಮಾಡಬೇಕು ಎಂಬ ಒತ್ತಡವನ್ನು ಹೇರಬಾರದು ಎಂದು ಪ್ರತಿಪಾದಿಸಿದವರು ಸಾವರ್ಕರ್.

**ಸಿಂಧೂ ಬಂಧಿ/ ಸಮುದ್ರ ಬಂಧಿ:** ಈ ಪದ್ಧತಿ ಅಭಿವೃದ್ಧಿಶೀಲ ಸಮಾಜದ ಲಕ್ಷಣವಲ್ಲ ಎನ್ನುವುದನ್ನು ಅರಿತ ಸಾವರ್ಕರ್ ಜಗತ್ತಿನಾದ್ಯಂತ ಐರೋಪ್ಯನ್ನರ ಪಾರುಪತ್ಯಕ್ಕೆ ಅವರ ನೌಕಾದಳವೇ ಪ್ರಮುಖ ಕಾರಣ ಎನ್ನುವುದನ್ನು ತಿಳಿಸಿದರು. ಚೋಳರು ಮತ್ತು ಶಿವಾಜಿ ಮಹಾರಾಜರು ಈ ನಿಟ್ಟಿನಲ್ಲಿ ಮಾಡಿದ ಶ್ಲಾಘನೀಯ ಕಾರ್ಯವನ್ನು ಮತ್ತು ನಮ್ಮ ಗತವೈಭವವನ್ನು ಸ್ಮರಿಸಿಕೊಳ್ಳಬೇಕು ಎಂದಿದ್ದರು.

**ವೇದೋಕ್ತಿ ಬಂಧಿ:** ಸನಾತನ ಧರ್ಮದ ಶ್ರೇಷ್ಠತೆಯ ಪ್ರತೀಕವಾದ ವೇದಗಳ ಅಧ್ಯಯನಕ್ಕಿದ್ದ ಬಂಧಿಯನ್ನು ಸಾವರ್ಕರ್ ಅವರು ಕಟುವಾಗಿ ವಿರೋಧಿಸಿದ್ದರು. ವೇದಗಳ ಅಧ್ಯಯನ ವೈಶ್ವಿಕವಾದದ್ದು. ವೇದಗಳ ಜ್ಞಾನವನ್ನು ಒಂದು ಜಾತಿಗೆ ಸೀಮಿತಗೊಳಿಸುವುದು ಸರಿಯಲ್ಲ. ಯಾರು ಜ್ಞಾನವನ್ನು ಬಯಸಿ ಬರುತ್ತಾರೋ, ಶಿಸ್ತಿರುತ್ತದೆಯೋ ಅವರೆಲ್ಲರೂ ವೇದವನ್ನು ಅಧ್ಯಯನ ಮಾಡಬಹುದು ಎಂದು ಪ್ರತಿಪಾದಿಸಿದರು.

**ಶುದ್ಧಿ ಬಂಧಿ:** ಅನ್ಯಾನ್ಯ ಕಾರಣಗಳಿಂದ ತಮ್ಮ ಮೂಲ ಧರ್ಮದಿಂದ ಮತಾಂತರಗೊಂಡ ಹಿಂದೂಗಳಿಗೆ ಮರಳಿ ತಮ್ಮ ಮಾತೃಧರ್ಮವನ್ನು ಸೇರುವ ಅವಕಾಶ ಇಲ್ಲದಿರುವುದನ್ನು ಸಾವರ್ಕರ್ ವಿರೋಧಿಸಿದ್ದರು. ಪ್ರತಿಯೊಬ್ಬರಿಗೂ ತಮ್ಮ ಮೂಲ ಧರ್ಮಕ್ಕೆ ಬರುವಂತಹ ಅವಕಾಶವನ್ನು ಕಲ್ಪಿಸಬೇಕು ಎನ್ನುವುದನ್ನು ತಿಳಿಸಿದರು.

**ಹಿಂದೂ ಸೈನಿಕೀಕರಣ:** ಸೇನೆಗೆ ಸೇರುವವರು ಹೇಡಿಗಳು ಎಂದು ರಾಷ್ಟ್ರೀಯ ಕಾಂಗ್ರೆಸ್ ಹೇಳುತ್ತಿದ್ದಾಗ ಖಾಸಗಿ ಆಗಿ ಬಂದೂಕು ಹಿಡಿದರೆ ಅಪರಾಧಿ, ಸೈನಿಕರಾಗಿ ಬಂದೂಕು ಹಿಡಿದರೆ ದೇಶಭಕ್ತರು. ಆದ್ದರಿಂದ ಸೈನಿಕರಾಗಿದ್ದುಕೊಂಡು ಸಮಯ ಬಂದಾಗ ರಾಷ್ಟ್ರಕ್ಕಾಗಿ ದುಡಿಯಿರಿ ಎಂದವರು ಸಾವರ್ಕರ್. ಅದಕ್ಕಾಗಿ 1942–43 ಸೈನ್ಯ ಭರ್ತಿ ಆಂದೋಳನವನ್ನು ಅಭಿನವ ಭಾರತ, ಹಿಂದೂ ಸಭಾದ ಸಹಾಯದಿಂದ ಹಮ್ಮಿಕೊಳ್ಳುತ್ತಾರೆ. ಇದರ ಪರಿಣಾಮ ಬಹುದೊಡ್ಡ ಫಲವನ್ನು ನೀಡುತ್ತದೆ. 1945–46ರಲ್ಲಿ ಮುಸ್ಲಿಂ ಲೀಗ್, ಸೈನ್ಯದಲ್ಲಿ 70% ಹಿಂದೂಗಳಾಗಿದ್ದಾರೆ, ಇದು ಅನ್ಯಾಯ ಎಂದು ಬೊಬ್ಬಿಡುತ್ತದೆ. ಸ್ವಾತಂತ್ರ್ಯ ಬಂದು ರಾಷ್ಟ್ರ ಇಬ್ಭಾಗವಾದಾಗ ಶೇ.93 ಮುಸಲ್ಮಾನ ಸೈನಿಕರು ಪಾಕಿಸ್ತಾನ ಸೈನ್ಯವನ್ನು ಸೇರಲು ಆಯ್ಕೆ ಮಾಡಿಕೊಳ್ಳುತ್ತಾರೆ. ಒಂದು ವೇಳೆ ಹಿಂದೂಗಳು ಸೇನೆಯಲ್ಲಿ ಸೇರುವುದಕ್ಕೆ ಸಾವರ್ಕರ್ ನೇತೃತ್ವವಹಿಸದೇ ಇರುತ್ತಿದ್ದರೆ ಸ್ವಾತಂತ್ರ್ಯೋತ್ತರದ ಅನಾಹುತಗಳ ತೀಕ್ಷ್ಣತೆ ಹೇಗಿದ್ದಿರಬಹುದು?



### ಹಿಂದೂ ಯಾರು?

ಸಾವರ್ಕರ್ ಅವರ ಸರ್ವಧರ್ಮದ ಕಲ್ಪನೆ ವಿಭಿನ್ನವಾದದ್ದು. ವಿಶ್ವದ ಒಳಿತನ್ನು ಬಯಸುವ ಹಿಂದೂ ಧರ್ಮದ ಪುನಃಪ್ರತಿಷ್ಠಾಪನೆ ಅವರ ಮುಖ್ಯ ಉದ್ದೇಶವಾಗಿತ್ತು. ಹಿಂದೂ ಎಂಬ ಪದಕ್ಕೆ ವ್ಯಾಪಕ ಅರ್ಥವನ್ನಿತ್ತವರು ಸಾವರ್ಕರ್. ಈ ರಾಷ್ಟ್ರದ ಅಸ್ಮಿತೆಯನ್ನು ಪೂಜ್ಯ ಭಾವಗಳಿಂದ ಕಾಣುವ ಪ್ರತಿಯೊಬ್ಬರೂ ಹಿಂದೂಗಳೇ ಎನ್ನುವುದನ್ನು ಸಾರಿ ಹೇಳಿದರು.

**ಆಸಿಂಧು ಸಿಂಧು ಪರ್ಯಂತ । ಯಸ್ಯ ಭಾರತ ಭೂಮಿಕಾ ।**
**ಪಿತೃಭೂಃ ಪುಣ್ಯಭೂಃಶ್ಚೈವ । ಸವೈ ಹಿಂದೂ ರಿತಿಸ್ಮೃತಾಃ ॥**

ಈ ಮೇಲಿನ ಶ್ಲೋಕವನ್ನು ರಚಿಸಿ ಹಿಂದೂಸ್ಥಾನ ಮತ್ತು ಹಿಂದುವಿನ ಕುರಿತು ಸ್ಪಷ್ಟ ಚಿತ್ರಣವನ್ನು ನೀಡಿದರು ಸಾವರ್ಕರ್.

**ದೂರದೃಷ್ಟಿತ್ವ:** ಸಾವರ್ಕರರು ಗಾಂಧೀಜಿಯವರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಪ್ರವೇಶವನ್ನು ಪಡೆಯುವ ಮೊದಲೇ ವಿದೇಶಿ ವಸ್ತುಗಳ ಬಹಿಷ್ಕಾರ ಆಂದೋಲನದ ನೇತೃತ್ವ ವಹಿಸಿದ್ದರು. ಈ ರಾಷ್ಟ್ರಕ್ಕೆ ಸಂಪೂರ್ಣ ಸ್ವಾತಂತ್ರ್ಯ ಬೇಕು ಎನ್ನುವುದನ್ನು ಅಂದಿನ ಕಾಂಗ್ರೆಸ್‌ಗೂ 20 ವರ್ಷಗಳ ಮೊದಲೇ ಸಾವರ್ಕರ್ ತಿಳಿಸಿದ್ದರು.

**ಆಶಾವಾದಿ ದೇಶಭಕ್ತ:** ಭೀಕರವಾದ ಕಠಿಣಿರಿನ ಶಿಕ್ಷೆಯನ್ನು ಎದುರಿಸುತ್ತಲೇ ಬ್ರಿಟಿಷ್ ಅಧಿಕಾರಿಗಳಿಗೆ ಸಡ್ಡುಹೊಡೆದು ನಿಲ್ಲುತ್ತಿದ್ದ ಸಾವರ್ಕರ್ ಛಾತಿ ಮೈರೋಮಾಂಚನ ಗೊಳಿಸುತ್ತದೆ. ಅಷ್ಟೇ ಅಲ್ಲದೇ ತಾನು ಜೈಲಿಗೆ ಸೇರಿದ ನಂತರ ಆಕಾಶವೇ ಕಳಗೆ ಬಿತ್ತೆಂದು, ತಲೆಯ ಮೇಲೆ ಕೈಹೊತ್ತು ಕೂರಲಿಲ್ಲ. ಬದಲಾಗಿ ರಾಷ್ಟ್ರಕ್ಕಾಗಿ ದುಡಿಯುವುದಕ್ಕೆ ಜೈಲಿನಲ್ಲಿದ್ದಾಗಲೂ ಸಿಕ್ಕ ಅವಕಾಶಗಳನ್ನೆಲ್ಲಾ ಬಾಚಿ ಪ್ರಖರವಾಗಿ ಬಳಸಿಕೊಳ್ಳುತ್ತಿದ್ದ ಸಾವರ್ಕರ್ ಜಾಣ್ಮೆ ಅಂತಿಂತದ್ದಲ್ಲ. ಜೈಲಿನಲ್ಲಿದ್ದರೂ ಜಾತಿಯ ಹೆಸರಲ್ಲಿ ಹಲವು ಭಿನ್ನಾಭಿಪ್ರಾಯಗಳಿದ್ದ ಜೈಲುವಾಸಿ ಹಿಂದುಗಳನ್ನೆಲ್ಲಾ ಒಗ್ಗೂಡಿಸಿ ಸಮರ್ಥವಾದ ಗುಂಪೊಂದನ್ನು ರಚಿಸಿದ್ದರು. ಜೈಲಿನಲ್ಲಾಗುತ್ತಿದ್ದ ಮತಾಂತರವನ್ನು ತಡೆದರಲ್ಲದೇ, ಮೊದಲೇ ಮತಾಂತರಗೊಂಡವರನ್ನು ಮರಳಿ ಹಿಂದೂ ಧರ್ಮಕ್ಕೆ ಮರಳುವಂತೆ ಮಾಡಿದರು. ಸೆರೆಮನೆಯಲ್ಲಿ ಆತ್ಮಹತ್ಯೆಗೆ ಮುಂದಾಗುತ್ತಿದ್ದವರಿಗೆ "ಸಾಯುವ ಮೊದಲು ಒಬ್ಬನಾದರೂ ವೈರಿಯನ್ನು ಸಂಹರಿಸಬೇಡವೇ?" ಎನ್ನುತ್ತಾ ಧೈರ್ಯ ತುಂಬುತ್ತಿದ್ದರು. ಜೈಲಿನ ನಿಯಮಗಳನ್ನು ಮತ್ತು ಜೈಲಾಧಿಕಾರಿಯ ಶೋಷಣೆಗಳನ್ನು ವಿರೋಧಿಸಿ ಉಪವಾಸಕ್ಕೆ ಕೂತ ನಾನಿಗೋಪಾಲನೆಂಬ ವ್ಯಕ್ತಿಗೆ "ನಾನಿ, ಹೀಗೆ ಸಾಯುವ ಬದಲು ಹೋರಾಡಿ ಶೂರನಂತೆ ಸಾಯಬಹುದು. ಎಂದು ಪ್ರೇರಣಾತ್ಮಕ ಮಾತುಗಳನ್ನಾಡಿ ಹೋರಾಟದ ಕಿಚ್ಚನ್ನು ಬಿತ್ತಿದರು. ಇಂತಹ ನೂರಾರು ಉದಾಹರಣೆಗಳು ಸಾವರ್ಕರ್ ಅವರ ಜೀವನಗಾಥೆಯಲ್ಲಿ ಸಿಗುತ್ತವೆ.

# ಸಂಸ್ಮರಣೆ ಡಾ. ಟಿ.ಎಂ.ಎ. ಪೈ (30ನೇ ಏಪ್ರಿಲ್, 1898 – 29ನೇ ಮೇ, 1979)

ಸ್ವಂತಕ್ಕೆ ಸ್ವಲ್ಪ ಸಮಾಜಕ್ಕೆ ಸರ್ವಸ್ವ ಎನ್ನುವ ಪರಿಕಲ್ಪನೆ ಕೇವಲ ಪುಸ್ತಕ, ಭಾಷಣಗಳಿಗೆ ಸೀಮಿತವಾಗಿದ್ದರೆ ಸಾಮಾಜಿಕ ಪರಿವರ್ತನೆ ಆಗಲು ಸಾಧ್ಯವಿಲ್ಲ. ಸಾಮಾಜಿಕ ನ್ಯಾಯದ ಕನಸನ್ನು ಪ್ರಾಯೋಗಿಕವಾಗಿ ತನ್ನ ನುಡಿ ಹಾಗೂ ನಡೆಗಳಲ್ಲಿ ದಿನನಿತ್ಯ ನಡೆಸಿದರೆ ಅಂತಹ ವ್ಯಕ್ತಿಗಳು ಮಹಾನ್ ಎನ್ನಿಸುವರು. ನಮ್ಮ ಸಂಸ್ಕೃತಿ ವ್ಯಕ್ತಿ ಪೂಜನಕ್ಕೆ ಅಷ್ಟೇನು ಮಹತ್ವ ಕೊಡದಿದ್ದರೂ, ಒಬ್ಬ ವ್ಯಕ್ತಿಯನ್ನು ಅವರ ಸಾಮಾಜಿಕ ಕಾರ್ಯ, ಸಾಧನೆ, ಸ್ಫೂರ್ತಿಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸಿ ಹೃದಯಾಂತರಾಳದಲ್ಲಿ ಸ್ಥಿರಗೊಳಿಸಲು ನೆನಪಿಸುವ ಕಾರ್ಯ ಮಾಡಲಾಗುತ್ತದೆ. ಅಂತಹ ಒಬ್ಬ ದೂರದೃಷ್ಟಿಯುಳ್ಳ ನಾಯಕನ ಕೊಡುಗೆಗಳನ್ನು ನೆನಪಿಸಬೇಕಾಗಿದೆ. ಅವರು ಮತ್ಯಾರೂ ಅಲ್ಲ, ಕರಾವಳಿಯಲ್ಲಿ ಡಾ. ಟಿ.ಎಂ.ಎ. ಪೈ ಅಂತಲೇ ಪ್ರಸಿದ್ಧಿಗೊಂಡಿರುವ ಡಾ. ತೋನ್ಸೆ ಮಾಧವ ಅನಂತ ಪೈ.

ಡಾ. ಟಿ.ಎಂ.ಎ. ಪೈ ಅವರು ಈಗಿನ ಉಡುಪಿ ಜಿಲ್ಲೆಯ ಕಲ್ಯಾಣಪುರದಲ್ಲಿ 1898 ಏಪ್ರಿಲ್ 30ರಂದು ಜನಿಸಿದರು. ಬಾಲ್ಯದಿಂದಲೇ ಅತ್ಯಂತ ದೃಢ ಸಂಕಲ್ಪ ಹಾಗೂ ಶ್ರದ್ಧೆಯಿಂದ ಓದಿ ಮದ್ರಾಸ್ ವೈದಕೀಯ ಕಾಲೇಜಿನಿಂದ 1925ರಲ್ಲಿ ಎಂಬಿಬಿಎಸ್ ಪದವಿ ಪಡೆದರು. ಎಲ್ಲಾ ಸಮುದಾಯ ಸಹಭಾಗಿತ್ವವಿಲ್ಲದೆ ಸಮಾಜದ ಪರಿವರ್ತನೆ ಸಾಧ್ಯವಿಲ್ಲವೆಂದು ಮನಗಂಡು ಸಮಾಜದ ಕಟ್ಟ ಕಡೆಯ ವ್ಯಕ್ತಿಯನ್ನೂ ಜೊತೆಗೂಡಿ ಶಿಕ್ಷಣ ಕ್ಷೇತ್ರಕ್ಕೆ ಕಾಲಿಟ್ಟರು. ತನ್ನ ಗ್ರಾಮೀಣ ಭಾಗದ ಜನರಿಗೆ ಶಿಕ್ಷಣದ ಜೊತೆಗೆ ಕೌಶಲ್ಯ ಅಭಿವೃದ್ಧಿಗೆ ಮುನ್ನಡಿಯಿಟ್ಟು ಭಾರತ ಅಭಿವೃದ್ಧಿ ಹೊಂದಲು ಸೂಕ್ತವಾದ ಶಿಕ್ಷಣ ವ್ಯವಸ್ಥೆ ರೂಪುಗೊಳ್ಳಬೇಕೆಂಬ ಉದ್ದೇಶದಿಂದ ಕೈತುಂಬ ಹಣ ಸಿಗುವ ಉದ್ಯೋಗಕ್ಕೆ ಸೇರದೆ ಕರಾವಳಿಯ ಕಲ್ಲಿನಿಂದ ಕೂಡಿದ ಬರಡು ಭೂಮಿಯಲ್ಲಿ "The Academy of General Education" ಅನ್ನು 1942ರಲ್ಲಿ ಸ್ಥಾಪಿಸಿದರು. ಅನಂತರ ಮಣಿಪಾಲ್ ಕಿರಿಯ ಪ್ರಾಥಮಿಕ ಶಾಲೆ ಹಾಗೂ ಮಣಿಪಾಲ್ ಹಿರಿಯ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿ ಸ್ಥಳೀಯ ಮಕ್ಕಳನ್ನು ಶಾಲೆಯ ಮೆಟ್ಟಿಲನ್ನು ಹತ್ತಿಸಿದರು. ಮುಂದುವರೆಯುತ್ತಾ 1949ರಲ್ಲಿ ಮಹಾತ್ಮ ಗಾಂಧಿ



ಸ್ಮಾರಕ ಕಾಲೇಜನ್ನು ಉಡುಪಿಯಲ್ಲಿ ಸ್ಥಾಪಿಸಿದರು. ಶಿಕ್ಷಣದ ಜೊತೆಗೆ ವೈದಕೀಯ ಶಿಕ್ಷಣ ಮತ್ತು ವೈದಕೀಯ ವ್ಯವಸ್ಥೆಯು ಕರಾವಳಿ ಭಾಗದಲ್ಲಿ ಇರಲೇಬೇಕಾದ ಅಗತ್ಯತೆಯನ್ನು ಗಮನಿಸಿ 1953 ರಲ್ಲಿ ಕಸ್ತೂರ್ಬಾ ವೈದ್ಯಕೀಯ ಕಾಲೇಜು ಹಾಗೂ ದೇಶದ ಮೊದಲ ಮಿಷನರಿ ಅಲ್ಲದ ಖಾಸಗಿ ವೈದ್ಯಕೀಯ ಕಾಲೇಜು ಮಣಿಪಾಲ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಅನ್ನು ಸೇವೆಯ ಆಧಾರದ ಮೇಲೆ ಸ್ಥಾಪಿಸಿದರು. ಅದರ ನಂತರ ಸಾಲು ಸಾಲು ಸಂಸ್ಥೆಗಳಾದ ಮಣಿಪಾಲ್ ಕಾಲೇಜ್ ಆಫ್ ಡೆಂಟಲ್ ಸೈನ್ಸಸ್, ಮಣಿಪಾಲ್ ಕಾಲೇಜ್ ಆಫ್ ಫಾರ್ಮಾಸ್ಯುಟಿಕಲ್ ಸೈನ್ಸಸ್ ಮತ್ತು ಮಣಿಪಾಲ್ ಪ್ರಿ–ಯೂನಿವರ್ಸಿಟಿ ಕಾಲೇಜು ಸೇರಿದಂತೆ ಇತರೆ ಶಿಕ್ಷಣ ಸಂಸ್ಥೆಗಳ ಸರಣಿಯನ್ನು ಸ್ಥಾಪಿಸಿದರು. ಹೀಗೆ ಮಣಿಪಾಲವನ್ನು ವಿಶ್ವದರ್ಜೆಯ ಶಿಕ್ಷಣ ಸಂಸ್ಥೆಯಾಗಿ ಗುರುತಿಸಿಕೊಳ್ಳಲು ಶ್ರಮಿಸಿದರು.

ಇಷ್ಟಕ್ಕೆ ದಣಿಯದ ಮುಂದೆ ತಮ್ಮ ಸಹೋದರ ಉಪೇಂದ್ರ ಅನಂತ್ ಪೈ ಜೊತೆಗೆ, ಉಡುಪಿಯಲ್ಲಿ ಸಿಂಡಿಕೇಟ್ ಬ್ಯಾಂಕ್ ಅನ್ನು ಸ್ಥಾಪಿಸಿ ಕರಾವಳಿಯ ಮನೆ ಮನೆಗೆ ಬ್ಯಾಂಕಿಂಗ್ ಸೇವೆಯನ್ನು ಪರಿಚಯಿಸಿದರು. ಡಾ. ಪೈ ಅವರು 1928 ರಲ್ಲಿ ಜನರಲ್ಲಿ ಉಳಿತಾಯ ಅಭ್ಯಾಸವನ್ನು ಉತ್ತೇಜಿಸಲು ಪಿಗ್ಮಿ ಠೇವಣಿ ಸಂಗ್ರಹವನ್ನು ಪ್ರಾರಂಭಿಸಿದರು. ಹೀಗೆ ಶಿಕ್ಷಣ, ಆರೋಗ್ಯ ಹಾಗೂ ಬ್ಯಾಂಕಿಂಗ್‌ನಲ್ಲಿ ಸ್ವಸಹಾಯವೇ ಅತ್ಯುತ್ತಮ ಸಹಾಯ ಎನ್ನುವ ತತ್ವದ ಅಡಿಯಲ್ಲಿ ಕರಾವಳಿ ಭಾಗದ ಜನರಲ್ಲಿ ಸ್ವಾಭಿಮಾನ ತುಂಬಿ ಮುಂದೆ ಕರ್ನಾಟಕವನ್ನು ಹಾಗೂ ಭಾರತವನ್ನು ವಿಶ್ವದರ್ಜೆಯ ಆರೋಗ್ಯ – ಶಿಕ್ಷಣ ಕ್ಷೇತ್ರದಲ್ಲಿ ಉತ್ತುಂಗಕ್ಕೆ ಏರಿಸಿದ ಖ್ಯಾತಿ ಡಾ. ಪೈ ಅವರದ್ದು.

ಅವರೇ ಹೇಳಿದಂತೆ "ನನ್ನ ತತ್ವಶಾಸ್ತ್ರವು ಸೇವೆಯಾಗಿದೆ– ಒಬ್ಬರ ಕುಟುಂಬ, ಸ್ನೇಹಿತರು ಮತ್ತು ಪ್ರಪಂಚದ ಎಲ್ಲಾ ಜನರಿಗೆ ದೇವರ ಒಂದು ದೊಡ್ಡ ಕುಟುಂಬ. ನೀವು ಸಾಮಾನ್ಯ ಜನರಿಗೆ ಸೇವೆ ಸಲ್ಲಿಸಿದರೆ, ಅವನು ನಿಮ್ಮನ್ನು ನಂಬುತ್ತಾನೆ ಮತ್ತು ಯಶಸ್ಸನ್ನು ಸಾಧಿಸಲು ಸಹಾಯ ಮಾಡುತ್ತಾನೆ; ಸಹಕಾರವು ನಾನು ಪಾಲಿಸುವ ನಿಯಮವಾಗಿದೆ ಮತ್ತು ನೀವು ಅದನ್ನು ಹೊಂದಿದ್ದರೆ, ನೀವು ಏನನ್ನಾದರೂ ಸಾಧಿಸಬಹುದು. ಅವರು ಬಡತನ, ರೋಗ ಮತ್ತು ಅಜ್ಞಾನವನ್ನು ಭಾರತೀಯ ಸಮಾಜದ ಮೂಲ ಅಸ್ವಸ್ಥತೆಗಳೆಂದು ಗುರುತಿಸಿದ್ದರು ಮತ್ತು ಶೈಕ್ಷಣಿಕ ಸೌಲಭ್ಯಗಳು ಮತ್ತು ಆರೋಗ್ಯ ಸೇವೆಯನ್ನು ಒದಗಿಸುವ ಮೂಲಕ, ಇತರ ಎಲ್ಲಾ ಕಾಯಿಲೆಗಳನ್ನು ಯಶಸ್ವಿಯಾಗಿ ನಿಭಾಯಿಸಬಹುದು ಎಂದು ಅವರು ಭಾವಿಸಿದರು. ತಾಳ್ಮೆಯೊಂದಿಗೆ ಸಹನೆಯು ಅಂತಿಮವಾಗಿ ಗೆಲ್ಲುತ್ತದೆ" ಎನ್ನುವ ಆಶಯವನ್ನು ಇಟ್ಟುಕೊಂಡು ಸಾಮಾಜಿಕ ನ್ಯಾಯದ ಆಧಾರದಲ್ಲಿ ನವ ಭಾರತವನ್ನು ಡಾ.ಪೈ ಅವರಂತಹ ಮಹನೀಯರ ಆದರ್ಶದ ದಾರಿಯಲ್ಲಿ ಕಟ್ಟೋಣ.




## ಪುಸ್ತಕ : ವೀರ ಸಾವರ್ಕರ್

ಪುಸ್ತಕ ಪರಿಚಯ

| | |
|---|---|
| ಲೇಖಕರು | : ಧನಂಜಯ ಕೀರ್ |
| ಅನುವಾದ | : ಜಿ.ಬಿ. ಹರೀಶ |
| ಪ್ರಕಾಶನ | : ಕುವೆಂಪು ಭಾಷಾ ಭಾರತಿ |
| ಬೆಲೆ | : 400/– |

ಸಾವರ್ಕರ್! ಆ ಹೆಸರೇ ಪ್ರತಿ ದೇಶಭಕ್ತನ ಮನದಲ್ಲಿ ಒಂದು ಮಿಂಚು ಸಂಚಾರವಾಗುತ್ತದೆ. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಅನೇಕ ಕ್ರಾಂತಿಕಾರಿಗಳ ಪ್ರೇರಣಾ ಸ್ರೋತ ವೀರ ಸಾವರ್ಕರ್.

ಸಾವರ್ಕರ್ ಸ್ವತಃ ಲೇಖಕರು, ಸಮಕಾಲೀನ ಸಮಾಜದ ಕುರಿತಾಗಿ ಅತ್ಯಂತ ಸೂಕ್ಷ್ಮವಾದ ಗ್ರಹಿಕೆಗಳನ್ನು ವಸ್ತುನಿಷ್ಠವಾಗಿ ತಮ್ಮ ಕೃತಿಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಇನ್ನು ಸಾವರ್ಕರ್ ಅವರ ಕುರಿತು ಅನೇಕರು ಬರೆದಿದ್ದಾರೆ. ಆದರೆ ಅದರಲ್ಲಿ ಬಹಳ ಮಹತ್ವದ ಕೃತಿ ಧನಂಜಯ ಕೀರ್ ಅವರ 'ವೀರ ಸಾವರ್ಕರ್'. ಧನಂಜಯ ಕೀರ್ ಅವರು ಸಮಕಾಲೀನ ನಾಯಕರ ಚರಿತ್ರೆಗಳನ್ನೂ ಬರೆದವರು. ಆದುದರಿಂದ ಅನೇಕ ವಿಸ್ತೃತ ಹರಹುಗಳು ಈ ಪುಸ್ತಕದ ಮುಖ್ಯವಾದ ಅಂಶ. ಅಲ್ಲದೆ ಸ್ವಾತಂತ್ರ್ಯ ಹೋರಾಟದ ದಿಕ್ಕು ದಿಸೆ, ರಾಷ್ಟ್ರೀಯತೆ, ಹಿಂದುತ್ವ, ಮುಸಲ್ಮಾನ ಸಮುದಾಯ ಮತ್ತು ಅಂದಿನ ದಿನಮಾನದ ರಾಜಕೀಯ ಸ್ಥಿತಿಗತಿಗಳ ಕುರಿತಾಗಿಯೂ ಆಳವಾದ ಒಳನೋಟಗಳು ಇಲ್ಲಿವೆ.




ಇನ್ನು ಕರ್ನಾಟಕದ ಮಟ್ಟಿಗಂತೂ ಅನೇಕ ಬಾರಿ ಸಾವರ್ಕರ್ ಅವರ ಹೆಸರಿನ ರಾಜಕೀಯ ವಿವಾದಗಳು ಗಂಟಲು ಹುಣ್ಣಿನಂತೆ ಆಗಾಗ ಮೇಲೇಳುತ್ತದೆ. ಆ ನಿಟ್ಟಿನಲ್ಲಿ ವೈಚಾರಿಕ ಚರ್ಚೆಗೆ ಅಗತ್ಯವಿದ್ದ ಮೂಲದ ಕೊರತೆಯನ್ನು ಈ ಪುಸ್ತಕದ ಕನ್ನಡಾನುವಾದ ನೀಗಿಸಿದೆ. ಇನ್ನು ಮೂಲದಷ್ಟೇ ತೂಕವಾದ ಅನುವಾದ, ಓದಿಸಿಕೊಂಡು ಹೋಗುವ ಓಘ, ಎಲ್ಲೂ ತಡೆಯನಿಸದಂತೆ ದುಡಿಸಿಕೊಂಡ ಭಾಷಾ ನಿಪುಣತೆ, 800 ಪುಟಗಳ ಬೃಹತ್ ಗ್ರಂಥವನ್ನು ಅನುವಾದ ಎನಿಸದಂತೆ ಮಾಡಿದ ಅನುವಾದ ಇವೆಲ್ಲದಕ್ಕೂ ಜಿ.ಬಿ.ಹರೀಶ ಅಭಿನಂದನಾರ್ಹರು.

**ಕುವೆಂಪು ಭಾಷಾ ಭಾರತಿ: https://www.kuvempubhashabharathi.org/books/?search=%E0%B2%B5%E0%B3%80%E0%B2%B0+%E0%B2%B8%E0%B2%BE%E0%B2%B5%E0%B2%B0%E0%B3%8D%E0%B2%95%E0%B2%B0%E0%B3%8D**

### ಸಾವರ್ಕರ್ ತನ್ನ ಅತ್ತಿಗೆಯ ಪತ್ರಕ್ಕೆ ಬರೆದ ಉತ್ತರ

ಸಾವರ್ಕಾಲಿಕ

ಜಗತ್ತಿನಲ್ಲಿ ಎಷ್ಟೋ ಹೂಗಳು ಅರಳುತ್ತವೆ. ಅರಳಿದಲ್ಲೇ ಒಣಗಿ ಉದುರಿ ಹೋಗುತ್ತವೆ. ಯಾರೂ ಅದನ್ನು ಎಣಿಸುವುದೂ ಇಲ್ಲ. ಗುಣಿಸುವುದೂ ಇಲ್ಲ. ಆದರೆ, ಗಜೇಂದ್ರ ಮೋಕ್ಷದ ಕಥೆಯಲ್ಲಿ ಬರುವ ಆ ಗಜೇಂದ್ರನು ತನ್ನ ಮೋಕ್ಷಕ್ಕಾಗಿ, ಸೊಂಡಿಲಿನಿಂದ ಕಿತ್ತು ಶ್ರೀಹರಿಯ ಪಾದಗಳಿಗೆ ಅರ್ಪಿಸುವ ತಾವರೆಯೇ ಧನ್ಯವಲ್ಲವೆ? ದೇವರ ಚರಣದಲ್ಲಿ ಅರ್ಪಣಗೊಳ್ಳುವ ಹೂವಿನ ಬಾಳೇ ಅಮರವಲ್ಲವೆ ಅತ್ತಿಗೆ? ಇಂದು ನಮ್ಮ ಭಾರತ ಮಾತೆಗೂ ಆ ಗಜೇಂದ್ರನ ಸ್ಥಿತಿಯೇ ಬಂದಿದೆ, ದಾಸ್ಯದ ಮೊಸಳೆ ಹಿಡಿತ ಮುಕ್ತಿ ಪಡೆಯಲು ಅವಳು ದೇವರಿಗೆ ಮೊರೆ ಇಡುತ್ತಿದ್ದಾಳೆ. ಹಾಗೆಯೇ ನಮ್ಮ ವಂಶದ ಹೋರಾಟಕ್ಕೆ ಕೈ ಹಾಕಿ, ಹೊಸದಾಗಿ ಅರಳಿದ ಹೂ ಕಿತ್ತು ಶ್ರೀರಾಮಚರಣಕ್ಕೆ ಅರ್ಪಿಸುತ್ತಿದ್ದಾಳೆ. ಅರ್ಪಿಸಲಿ ಬಿಡು. ನಿಜಕ್ಕೂ ಧನ್ಯ ನಮ್ಮ ವಂಶ, ನಿಶ್ಚಿತವಾಗಿಯೂ ಇದು ಈಶ್ವರನ ಅಂಶ. ದೇವರ ಕಾರ್ಯಕ್ಕೆ ಹೂ ಒದಗಿಸುತ್ತಿರುವ ನಮ್ಮ ವಂಶದ ಹೂದೋಟವೇ ನಿಜಕ್ಕೂ ಧನ್ಯ."

– ಕನ್ನಡ ಅನುವಾದ ಖ್ಯಾತ ಲೇಖಕ ಶಿವರಾಮು

## ಎಲ್ಲೋ ಕೇಳಿದ ಕಥೆ

### ನಿಯಮ ಪಾಲನೆ



ರಾಷ್ಟ್ರೀಯ ಸ್ವಯಂಸೇವಕ ಸಂಘದ ಆರಂಭದ ವರ್ಷಗಳಲ್ಲಿ ರಘುಜೀರಾವ್ ಭೋಂಸ್ಲೆ ಮಹಾರಾಜರ ವಾಡಾದಲ್ಲಿ ವಿಜಯ ದಶಮಿಯ ಪಥ ಸಂಚಲನಕ್ಕಾಗಿ ಸ್ವಯಂಸೇವಕರು ಸೇರುತ್ತಿದ್ದರು. ಆದರೆ ಸ್ವಯಂಸೇವಕರ ಸಂಖ್ಯೆ ಹೆಚ್ಚುತ್ತಿದ್ದ ಕಾರಣ ಆ ಜಾಗ ಸಾಲದಾಯಿತು. ಸಂಘ ಸಂಸ್ಥಾಪಕರಾದ ಡಾಕ್ಟರ್ ಜಿ ರವರು ಅಲ್ಲಿಯೇ ಮತ್ತೊಂದು ಸ್ಥಳ ಚಿಟಣೀಸ್ ಪಾರ್ಕ್ ಗುರುತಿಸಿ, ಅಲ್ಲಿ ಎಲ್ಲ ಸ್ವಯಂಸೇವಕರು ಸೇರಿದರೆ ಜಾಗದ ಅಭಾವವಿಲ್ಲದೆ ಇರುತ್ತದೆ ಎಂದು ಆಲೋಚಿಸಿದರು. ಆದರೆ ಆ ಪಾರ್ಕ್ ಪುರಸಭೆಯ ಒಡೆತನದಲ್ಲಿದ್ದ ಸ್ಥಳವಾಗಿತ್ತು. ವಿಜಯದಶಮಿಯ ಪಥಸಂಚಲನಕ್ಕೆ ಬಳಸ ಬೇಕಾದರೆ ಪುರಸಭೆಯ ಅಧ್ಯಕ್ಷರ ಅನುಮತಿ ಪಡೆಯಬೇಕಿತ್ತು. ಸಮೀಉಲ್ಲಾಖಾನ್ ಎಂಬುವರು ಪುರಸಭೆಯ ಅಧ್ಯಕ್ಷರಾಗಿದ್ದರು ಹಾಗೂ ಅವರು ಡಾಕ್ಟರ್ ಜಿ ರವರ ಸ್ನೇಹಿತರಾಗಿದ್ದರು. ಆದರೂ ಆ ಸ್ಥಳ ಬಳಸಲು ಔಪಚಾರಿಕವಾಗಿ ಅನುಮತಿ ಪಡೆಯಬೇಕಿತ್ತು ಎಂದು ಡಾಕ್ಟರ್‌ಜಿರವರು ಸ್ವತಃ ತಾವೇ ಇದರ ಪ್ರಸ್ತಾವನೆ ಮಾಡಲು ಸಮೀಉಲ್ಲಾಖಾನ್‌ರವರನ್ನು ಭೇಟಿ ಮಾಡಿದರು.

ಆಗ ಸಮೀಉಲ್ಲಾಖಾನ್‌ರವರು "ಡಾಕ್ಟರ್‌ಜಿ ಈ ಚಿಕ್ಕ ವಿಷಯಕ್ಕೆ ನೀವು ಬರಬೇಕಾದ ಅಗತ್ಯವೇನಿತ್ತು? ಆ ಪಾರ್ಕ್ ಸದಾ ತೆರದೇ ಇರುತ್ತದೆ ನಿಮಗೆ, ನೀವು ಇಲ್ಲಿಗೆ ಬಂದಿದ್ದು ಸಂತೋಷವೇ, ಒಂದು ಚೀಟಿ ಕಳುಹಿಸಿದ್ದರು ಸಾಕಾಗಿತ್ತು, ಬೇರೆಯವರು ಅನುಮತಿಯ ಗೋಜಿಗೆ ಹೋಗುವುದಿಲ್ಲ, ನೀವು ಪಾರ್ಕನ್ನು ಧಾರಳವಾಗಿ ಬಳಸಬಹುದು" ಎಂದಿದ್ದರು. ಡಾಕ್ಟರ್‌ಜಿರವರು ಅದಕ್ಕೆ "ಆದರೂ ನಿಮಗೆ ಮೊದಲೇ ತಿಳಿಸಿ, ನಿಮ್ಮಿಂದ ಸಮ್ಮತಿ ಪಡೆಯಬೇಕಾದುದ್ದು ನಮ್ಮ ಕರ್ತವ್ಯವಲ್ಲವೇ? ನೀವು ನಮ್ಮ ಬಗ್ಗೆ ಉದಾರವಾಗಿರುವುದು ಸಂತೋಷವೇ, ಆದರೂ ನಾವು ನಿಯಮದ ಪಾಲನೆ ಮಾಡಬೇಕಲ್ಲವೇ? ನಮ್ಮ ಕರ್ತವ್ಯ ನಾವು ಮಾಡಿದ್ದೇವೆ" ಎಂದಿದ್ದರು.

ನಿಯಮ ಪಾಲನೆಯ ಮಹತ್ವವನ್ನು ಡಾಕ್ಟರ್ ಜಿ ರವರು ಇದರ ಮೂಲಕ ತೋರಿಸಿ ಕೊಟ್ಟಿದ್ದರು. ನಿಯಮವೆಂಬುದು ಎಲ್ಲರಿಗೂ ಸಮಾನ ಎಂದು ಈ ಘಟನೆಯ ಮೂಲಕ ಅರಿಯಬಹುದು.

ಮೂಲ: ಸ್ಮೃತಿ ಮಂದಾರ

ಸಂಪಾದಕೀಯ ಸಹಕಾರ: ವಾದಿರಾಜ್, ಶೈಲೇಶ್ ಕುಲಕರ್ಣಿ, ತನ್ಮಯೀ ಪ್ರೇಮಕುಮಾರ್, ಅರುಣ್ ಕಿರಿಮಂಜೇಶ್ವರ, ವಿನಯ್ ಕೃಷ್ಣ, ಕೌಶಿಕ್ ಗಟ್ಟಿಗಾರ್

# ಕರ್ನಾಟಕದಲ್ಲಿ ಒಳಮೀಸಲಾತಿ – ಅಂತ್ಯೋದಯದತ್ತ ದಿಟ್ಟ ಹೆಜ್ಜೆ

ಪರದೇಶದಿಂದ ಬಂದ ಕ್ರೈಸ್ತ, ಮುಸ್ಲಿಮರಂತೆ ಹಿಂದುಸಮಾಜವು ಏಕಸ್ವರೂಪಿ ಸಮಾಜವಲ್ಲ. ಹಿಂದುಗಳಲ್ಲಿ ಇರುವಷ್ಟು ವಿವಿಧತೆಯನ್ನು ಮತ್ತೆಲ್ಲೂ ಕಾಣಲಾಗದು. ಹಲವು ಬಗೆಯ ವಿವಿಧತೆಗಳಲ್ಲಿ ಜಾತಿ, ಉಪಜಾತಿಗಳು ನಮ್ಮ ಸಮಾಜ ರಚನೆಯಲ್ಲಿ ಹಾಸುಹೊಕ್ಕಾಗಿವೆ. ಜಾತಿ ಉದ್ಯೋಗಾಧಾರಿತವಾಗಿಯೂ ಇದೆ. ಎಲ್ಲ ಕಾಯಕಗಳನ್ನು ಸಮಾನ ಗೌರವದಿಂದ ನೋಡಲಾಗದ ಮಾನಸಿಕತೆ ಹಿಂದು ಸಮಾಜಕ್ಕೆ ಅಂಟಿದ ಖಾಯಿಲೆ. ವಿವಿಧತೆಯ ಭಾಗವಾಗಿದ್ದ ಜಾತಿ, ಜಾತೀಯತೆಯಾಗಿ ಕೊನೆಗದು ಅಸ್ಪೃಶ್ಯತೆಯ ರೂಪ ತಳೆದು ಇಡೀ ಸಮಾಜವನ್ನು ಹಿಂಡಿ ಹಾಕುತ್ತಿದೆ.

ಈ ಜಾತಿ ಆಧಾರಿತ ಮೇಲು ಕೀಳಿನ ರೋಗದ ವಿರುದ್ಧ ಕನ್ನಡದ ಮನಸ್ಸುಗಳದ್ದು ಅವಿರತ ಹೋರಾಟ. ಬಸವಣ್ಣ, ಕನಕರೂ ಸೇರಿದಂತೆ ನೂರಾರು ಶರಣರು, ದಾಸರದ್ದು ಅನನ್ಯ ಪ್ರಯತ್ನ. ಮೈಸೂರಿನ ಮಹಾರಾಜರಾಗಿದ್ದ ನಾಲ್ವಡಿಯವರು 1920 ರಲ್ಲೇ ಎಲ್ಲರಿಗೂ ಅವಕಾಶ ಒದಗಿಸುವ ಮೀಸಲಾತಿ ನೀತಿಯನ್ನು ಜಾರಿಗೆ ತಂದವರು. ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕೊಟ್ಟ ಮೊದಲ ಸಾಲಿನ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಆ ಕಾರಣಕ್ಕೆ ಅಂದಿನ ಮುಖ್ಯಮಂತ್ರಿ ದೇವರಾಜ ಅರಸರು ಸದಾ ಸ್ಮರಣೀಯರು.

ವಿದ್ಯೆ, ಉದ್ಯೋಗ, ರಾಜಕೀಯ ಪ್ರಾತಿನಿಧ್ಯದ ಅವಕಾಶಗಳಿಂದ ದೂರವೇ ಉಳಿದಿದ್ದ ಅಸ್ಪೃಶ್ಯ ಸಮಾಜಗಳಿಗೆ ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಭಾಗ್ಯ ವಿಧಾತ. ಸ್ವಾತಂತ್ರ್ಯೋತ್ತರ ಭಾರತಕ್ಕೆ ಎಲ್ಲರನ್ನು ಒಳಗೊಳ್ಳುವ ಸಂವಿಧಾನವನ್ನು ರೂಪಿಸಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿಯ ಮೂಲಕ ಸಮಾನ ಅವಕಾಶದ ಬಾಗಿಲನ್ನು ತೆರೆದವರು ಬಾಬಾಸಾಹೇಬರು.

**ಮೀಸಲಾತಿಯ ಯಶಸ್ಸು ಇರುವುದೇ ಅದನ್ನು ಪರಿಣಾಮಕಾರಿಯಾಗಿ ಜಾರಿ ಮಾಡುವುದರಲ್ಲಿ. ಮೀಸಲಾತಿಯನ್ನು ಪರಿಣಾಮಕಾರಿಗೊಳಿಸುವ ಹಲವು ಸಾಧ್ಯತೆಗಳಲ್ಲಿ ಒಳಮೀಸಲಾತಿಯೂ ಒಂದು.**

ಒಳಮೀಸಲಾತಿಗಾಗಿ ಕರ್ನಾಟಕವೂ ಸೇರಿದಂತೆ ಹಲವೂ ರಾಜ್ಯಗಳಲ್ಲಿ ಮೂರು ದಶಕಗಳಿಂದ ನಿರಂತರ ಹೋರಾಟ ನಡೆದಿದೆ. ಒಳ ಮೀಸಲಾತಿ ಹೋರಾಟದ ಬಗ್ಗೆ ಬಿಜೆಪಿಗೆ ಸಹಾನುಭೂತಿ ಇದ್ದದ್ದು ನಿಜ. ಸಹಾನುಭೂತಿ ಕ್ರಿಯಾತ್ಮಕ ರೂಪ ಪಡೆಯದಿದ್ದರೆ ಅಪ್ರಯೋಜಕ. ಕರ್ನಾಟಕದ ಬಿಜೆಪಿ ಸರ್ಕಾರ ಈ ದಿಕ್ಕಿನಲ್ಲಿ ದಿಟ್ಟ, ಸ್ಪಷ್ಟ ಹೆಜ್ಜೆ ಇಟ್ಟು ಶೋಷಿತ ಸಮುದಾಯಗಳ ಮೆಚ್ಚುಗೆಗೆ ಪಾತ್ರವಾಗಿದೆ. ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟ ಜಾತಿ, ಪಂಗಡಗಳ ಮೀಸಲಾತಿಯ ವಿಸ್ತರಣೆ, ಪರಿಶಿಷ್ಟ ಜಾತಿಯ ಮೀಸಲಾತಿಯಲ್ಲಿ ವರ್ಗೀಕರಣ, ಬಳಲಿದ ಗ್ರಾಮೀಣ ಭಾಗದ ರೈತಾಪಿ ಸಮುದಾಯಗಳಿಗೆ ಮೀಸಲಾತಿಯಲ್ಲಿ ಹೆಚ್ಚಿನ ಅವಕಾಶ, ಹೆತ್ತವರನ್ನು ಕಳೆದುಕೊಂಡ ಅನಾಥ ಮಕ್ಕಳಿಗೆ ಮೀಸಲಾತಿಯ ವಿಶೇಷ ಆದ್ಯತೆ – ಹೀಗೆ ಹಲವು ಮಗ್ಗಲುಗಳಲ್ಲಿ ಮೀಸಲಾತಿಯನ್ನು ಪರಿಣಾಮಕಾರಿಗೊಳಿಸಲಾಗಿದೆ. ಸಾಮಾಜಿಕ ನ್ಯಾಯದ ಆಶಯವನ್ನು ಸಮಾಜದ ಕಟ್ಟಕಡೆಯ ವ್ಯಕ್ತಿಗೆ ತಲುಪಿಸುವ ಈ ನಿರ್ಧಾರ ಐತಿಹಾಸಿಕವಾದದ್ದು.

**ಮೀಸಲಾತಿ ಮೊದಲು ಇದ್ದದ್ದು**

| | | | |
|---|---|---|---|
| SC - 15% | ST - 3% | Category 1 - 4% | |
| 2A - 15% | 2B - 4% | 3A - 4% | 3B - 5% |

**ಈಗ ತಂದಿರುವ ಬದಲಾವಣೆ**

| | | |
|---|---|---|
| SC - 17% | ST - 7% | Category 1 - 4% |
| 2A - 15% | 2C - 6% | 2D - 7% |

**ಬದಲಾವಣೆಯ ಮುಖ್ಯಾಂಶಗಳು**

- ಜನಸಂಖ್ಯೆಗೆ ಅನುಗುಣವಾಗಿ ಇರಬೇಕಾದ ಪರಿಶಿಷ್ಟ ಜಾತಿಗಳ ಮೀಸಲಾತಿಯನ್ನು ಶೇ 15 ರಿಂದ ಶೇ 17 ಕ್ಕೆ ಏರಿಕೆ ಮಾಡಲಾಗಿದೆ. ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಶೇ 3 ರಿಂದ ಶೇ 7 ಕ್ಕೆ ಹೆಚ್ಚಿಸಲಾಗಿದೆ.
- ST ಮೀಸಲಾತಿ ಹೆಚ್ಚಳ ಆಗಬೇಕೆಂಬುದು 1960 ರಿಂದಲೇ ಇದ್ದ ಬೇಡಿಕೆ. ಕಳೆದ ಕೆಲ ವರ್ಷಗಳಿಂದ ಈ ಮೀಸಲಾತಿಯ ಹೆಚ್ಚಳಕ್ಕಾಗಿ ದಾವಣಗೆರೆ ಜಿಲ್ಲೆಯ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿ ನಿರಂತರ ಹೋರಾಟ ನಡೆಸಿದ್ದರು.
- ಮೀಸಲಾತಿಯನ್ನು ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚಿಸುವ ಬಿಜೆಪಿ ಸರ್ಕಾರದ ನಿರ್ಧಾರದಿಂದ 101 SC ಜಾತಿಗಳಿಗೆ ಹಾಗೂ 50 ST ಜಾತಿಗಳಿಗೆ ನೇರ ಉಪಯೋಗವಾಗಿದೆ.
- ಹಾಗೆಯೇ ST ಪಟ್ಟಿಯಲ್ಲಿ ಪ್ರಮುಖ ಜಾತಿಯೆನಿಸಿದ ವಾಲ್ಮೀಕಿ / ಬೇಡ ಸಮುದಾಯದ ಜೊತೆಗೆ ತಳವಾರ, ಪರಿವಾರ ಪರ್ಯಾಯ ಶಬ್ದಗಳನ್ನು ಸೇರಿಸಲು ಸಂಸತ್ತು ಒಪ್ಪಿಗೆ ನೀಡಿರುವುದು ಚಾರಿತ್ರಿಕ ನಿರ್ಧಾರ. ಎರಡು ದಶಕಗಳಿಂದ ಈ ಬೇಡಿಕೆ ನೆನೆಗುದಿಗೆ ಬಿದ್ದಿತ್ತು.
- ಹಾಗೆಯೇ ಜೇನು ಕುರುಬ, ಕಾಡು ಕುರುಬ ಜೊತೆಗೆ ಬಿಟ್ಟು ಹೋಗಿದ್ದ ಬೆಟ್ಟ ಕುರುಬ ಜಾತಿಯನ್ನು ST ಪಟ್ಟಿಗೆ ಸೇರಿಸುವ ಕೇಂದ್ರ ಸರಕಾರ ಆದೇಶ ಮೈಸೂರು, ಚಾಮರಾಜನಗರ, ಕೊಡಗು ಭಾಗದ ಕಾಡುಗಳಲ್ಲಿ ಕಳೆದುಹೋಗಿದ್ದ ಹಲವು ಕುಟುಂಬಗಳಿಗೆ ಮೀಸಲಾತಿಯ ಆಸರೆ ಸಿಕ್ಕಂತಾಗಿದೆ.

SC ಮೀಸಲಾತಿಯಲ್ಲಿ ವರ್ಗೀಕರಣ ಜಾರಿ ಮಾಡಬೇಕೆಂಬುದು ಬಹುದಿನಗಳ ಬೇಡಿಕೆ. ಇದಕ್ಕಾಗಿ ಮೂರು ದಶಕಗಳಿಗೂ ಮಿಕ್ಕ ಹೋರಾಟಗಳು ನಡೆದಿದ್ದವು.

ಎಸ್ಸಿ ಮೀಸಲಾತಿಯ ಎಲ್ಲ stakeholders ಅನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹಲವು ಸುತ್ತಿನ ಮಾತುಕತೆ ನಡೆಸಿ ಜನಸಂಖ್ಯೆಗೆ ಅನುಗುಣವಾಗಿಯೇ ವೈಜ್ಞಾನಿಕವಾದ ಒಳಮೀಸಲಾತಿಯ ಸೂತ್ರವನ್ನು ರೂಪಿಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ.

ನ್ಯಾ॥ ಸದಾಶಿವ ಆಯೋಗದ ಮೂಲ ಆಶಯವನ್ನು ಉಳಿಸಿಕೊಂಡು 2011ರ ಜನಗಣತಿಯ ಸಂಖ್ಯಾಧಾರಗಳು ಮತ್ತು ವಿಸ್ತರಿಸಲಾದ ಶೇ. 17ರ ಮೀಸಲಾತಿಯನ್ನು ಬಳಸಿಕೊಂಡು ವರ್ಗೀಕರಣದ ಸೂತ್ರ ರೂಪಿಸಲಾಗಿದೆ. 2011ರ ಜನಗಣತಿಯ ವರದಿಯಂತೆ ಕರ್ನಾಟಕದಲ್ಲಿ ಖಅ ಜನಸಂಖ್ಯೆ 1,04,74,992. ಈಗಿರುವ ಶೇ. 17 ಮೀಸಲಾತಿಯನ್ನು ವರ್ಗೀಕರಿಸಿದರೆ ತಲಾ 6 ಲಕ್ಷ ಜನಸಂಖ್ಯೆಗೆ ಶೇ 1ರಷ್ಟು ಮೀಸಲಾತಿ ದೊರಕುತ್ತದೆ.

**ಶೇ. 17ರ SC ಮೀಸಲಾತಿಯ ವರ್ಗೀಕರಣ ಈ ರೀತಿ ಇದೆ:**

| | | | |
|---|---|---|---|
| ಗುಂಪು 1 | 6% | ಮಾದಿಗ ಉಪಜಾತಿಗಳು | ಜನಸಂಖ್ಯೆ 32,60,234 |
| ಗುಂಪು 2 | 5.5% | ಹೊಲೆಯ ಉಪಜಾತಿಗಳು | ಜನಸಂಖ್ಯೆ 32,59,482 |
| ಗುಂಪು 3 | 4.5% | ಬೋವಿ, ಬಂಜಾರ, ಕೊರಮ, ಕೊರಚ | ಜನಸಂಖ್ಯೆ 26,51,067 |
| ಗುಂಪು 4 | 1% | ಮಾದಿಗ, ಹೊಲೆಯ ಗುಂಪಿನ ಸಣ್ಣ ಜಾತಿಗಳು ಮತ್ತು ಅಲೆಮಾರಿ ಜಾತಿಗಳು | ಜನಸಂಖ್ಯೆ 5,85,570 |

- ಕರ್ನಾಟಕದಲ್ಲಿ SC - ST ಮೀಸಲಾತಿಯನ್ನು ಏರಿಕೆ ಮಾಡಿದ್ದು ಜನಸಂಖ್ಯೆಗೆ ಅನುಗುಣವಾಗಿ. ಹಾಗೆಯೇ ವರ್ಗೀಕರಣವನ್ನೂ ಜನಸಂಖ್ಯೆಗೆ ಅನುಗುಣವಾಗಿಯೇ ಮಾಡಲಾಗಿದೆ.
- ಹೊಲೆಯ ಮತ್ತು ಮಾದಿಗ ಗುಂಪಿನ ಒಟ್ಟು ಜನಸಂಖ್ಯೆ ಬಹುತೇಕ ಸಮಾನವಾಗಿದೆ. ಆದರೆ ನ್ಯಾ. ಸದಾಶಿವ ಆಯೋಗ ಉಲ್ಲೇಖಿಸುವಂತೆ ಮಾದಿಗ ಉಪಜಾತಿಗಳು ಹೆಚ್ಚು ಸಂತ್ರಸ್ತ ಸಮುದಾಯವೆನಿಸಿದೆ. ದೇವದಾಸಿಯರು, ಜೀತಕ್ಕೆ ಸಿಲುಕಿದವರು, ಶಾಲೆಯನ್ನು ಅರ್ಧಕ್ಕೆ ಬಿಟ್ಟವರು, ಬಾಲಾಪರಾಧಿಗಳು ಇಂತಹ ಪಟ್ಟಿಯ ಅಂಕಿಅಂಶಗಳಲ್ಲಿ ಮಾದಿಗ ಉಪಜಾತಿಗಳವರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಹೀಗಾಗಿ ಸಹಜವಾಗಿಯೆ ಈ ಗುಂಪಿಗೆ 0.5 % ರಷ್ಟು ಹೆಚ್ಚು ಮೀಸಲಾತಿ ಕಲ್ಪಿಸಲಾಗಿದೆ.
- ಅಲೆಮಾರಿಗಳೂ ಸೇರಿದಂತೆ ಸಣ್ಣ ಜಾತಿಗಳನ್ನು ಪ್ರತ್ಯೇಕಿಸಿ ಅವರದೇ ಪ್ರತ್ಯೇಕ ಗುಂಪು ಮಾಡಿ 1% ಮೀಸಲು ನಿಗದಿಪಡಿಸಲಾಗಿದೆ. ಈ ಹಿಂದೆಯೇ ಅಲೆಮಾರಿಗಳ ಜಾತಿಗಳ ಪಟ್ಟಿಯಲ್ಲಿ 'ಸೂಕ್ಷ್ಮ, ಅತಿಸೂಕ್ಷ್ಮ' ಜಾತಿಗಳೆಂದು ಗುರುತಿಸಲಾದ 10 ಸಾವಿರಕ್ಕಿಂತ ಕಡಿಮೆ ಇರುವ ಜಾತಿಗಳನ್ನು ಸೇರಿಸಲಾಗಿತ್ತು. ಇಲ್ಲಿಯೂ ಅದೇ ಮಾದರಿಯನ್ನು ಅನುಸರಿಸಲಾಗಿದೆ.

**ಸ್ಪೃಶ್ಯ ಜಾತಿಗಳೆನಿಸಿದ ಬಂಜಾರ, ಬೋವಿ, ಕೊರಚ, ಕೊರಮ ಸಮುದಾಯಗಳು ಮೂರು ಬೇಡಿಕೆಯನ್ನು ಮುಂದಿಟ್ಟಿದ್ದವು.**

1] ಸ್ಪೃಶ್ಯ ಜಾತಿಗಳನ್ನು SC ಪಟ್ಟಿಯಿಂದ ತೆಗೆಯಬಾರದು.

2] ಈ ಬಗ್ಗೆ ಖಾತರಿಪಡಿಸಿ ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗಕ್ಕೆ ಕರ್ನಾಟಕ ಸರಕಾರ ಪತ್ರ ಬರೆಯಬೇಕು.

3] ನ್ಯಾ॥ ಸದಾಶಿವ ಆಯೋಗ ಸ್ಪೃಶ್ಯ ಗುಂಪಿಗೆ ನಿಗದಿಪಡಿಸಿದ ಶೇ.3 ರ ಮೀಸಲಾತಿಯನ್ನು ಜನಸಂಖ್ಯೆಗೆ ಅನುಗುಣವಾಗಿ ಮಾರ್ಪಾಡು ಮಾಡಬೇಕು.

ಕರ್ನಾಟಕ ಸರ್ಕಾರ ಎಲ್ಲ ಒತ್ತಡಗಳ ನಡುವೆ ಮೂರು ಬೇಡಿಕೆಯನ್ನು ಒಪ್ಪಿ ಎಲ್ಲರ ಆಶಯವನ್ನು ಸರಿದೂಗಿಸಿದೆ. ಸ್ಪೃಶ್ಯ ಸಮುದಾಯಗಳ ಗುಂಪಿಗೆ ಜನಸಂಖ್ಯೆಗೆ ಅನುಗುಣವಾಗಿಯೇ 4.5% ಮೀಸಲಾತಿ ನಿಗದಿಪಡಿಸಿದೆ. ಬಂಜಾರ, ಬೋವಿ, ಕೊರಚ, ಕೊರಮ ಜಾತಿಗಳನ್ನು ಪರಿಶಿಷ್ಟ ಜಾತಿಗಳಲ್ಲಿಯೇ ಉಳಿಸಬೇಕೆಂದು ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗಕ್ಕೆ ಪತ್ರ ಬರೆದಿದೆ.

ವರ್ಗೀಕರಣದಲ್ಲಿದ್ದ ಮತ್ತೊಂದು ತೊಡಕು ಆದಿ ಕರ್ನಾಟಕ, ಆದಿದ್ರಾವಿಡ ಎಂದು ಗುರುತಿಸಿಕೊಂಡಿರುವ ಸಮುದಾಯಗಳದ್ದು. ದಕ್ಷಿಣ ಕರ್ನಾಟಕದ 12 ಜಿಲ್ಲೆಗಳಲ್ಲಿ ಂಏ, ಂಆ ಹೆಸರಿನಲ್ಲಿ ಮಾದಿಗ ಮತ್ತು ಹೊಲೆಯ ಎರಡೂ ಜಾತಿ ಸಮುದಾಯಗಳು ಗುರುತಿಸಿಕೊಳ್ಳುವುದರಿಂದ



ನಿಖರ ವರ್ಗೀಕರಣಕ್ಕೆ ಇದು ತೊಡಕಾಗಿತ್ತು. ಹಾಗೆ ನೋಡಿದರೆ ನ್ಯಾ॥ ಸದಾಶಿವ ಆಯೋಗ ಇಡೀ ಆದಿಕರ್ನಾಟಕವನ್ನು ಹೊಲೆಯ ಗುಂಪಿಗೂ, ಇಡೀ ಆದಿ ದ್ರಾವಿಡವನ್ನು ಮಾದಿಗರ ಗುಂಪಿಗೂ ಸೇರಿಸಿತ್ತು. ಆದರೆ ಮಾಧುಸ್ವಾಮಿ ನೇತೃತ್ವದ ಸಚಿವ ಸಂಪುಟ ಉಪಸಮಿತಿ ಎಲ್ಲ ಜಿಲ್ಲೆಗಳಲ್ಲಿ ತಾಲೂಕು ಹಂತದಲ್ಲಿ ಮಾಹಿತಿ ಪಡೆದು ವಿಂಗಡಣೆ ಮಾಡಿರುವುದು ಐತಿಹಾಸಿಕ ಪ್ರಕ್ರಿಯೆ ಆಗಿದೆ. ಇಷ್ಟಾಗಿಯೂ ಸಣ್ಣಪುಟ್ಟ ಅಸಮಾಧಾನಗಳು ಮೀಸಲಾತಿಯ ಹಂಚಿಕೆಯ ವಿಷಯದಲ್ಲಿರುವುದು ಸಹಜ.

ಒಳಮೀಸಲಾತಿ ಕುರಿತಾದ ಬೇಡಿಕೆ – ಹೋರಾಟ ಇದು ಕೇವಲ ಕರ್ನಾಟಕಕ್ಕೆ ಸೀಮಿತವಾದುದಲ್ಲ. ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಬಿಹಾರ, ಉತ್ತರಪ್ರದೇಶ, ಹರ್ಯಾಣ, ಪಂಜಾಬ್ ರಾಜ್ಯಗಳಲ್ಲಿಯೂ ಮೀಸಲಾತಿಯ ಹಂಚಿಕೆಯ ಹೋರಾಟಗಳು ವಿವಿಧ ಹಂತದಲ್ಲಿದೆ.

- ಪಂಜಾಬ್ ದೇಶದಲ್ಲೇ ಅತ್ಯಂತ ಹೆಚ್ಚು – ಶೇ. 30 – ಪರಿಶಿಷ್ಟ ಜಾತಿಗಳ ಜನಸಾಂದ್ರತೆ ಇರುವ ರಾಜ್ಯ. 1975ರ ಮೇ 5 ರಂದು ಅಂದಿನ ಮುಖ್ಯಮಂತ್ರಿ ಜೈಲ್ ಸಿಂಗ್ ಅರ್ಧದಷ್ಟು ಪರಿಶಿಷ್ಟ ಜಾತಿ ಮೀಸಲಾತಿಯನ್ನು ವಾಲ್ಮೀಕಿ ಹಾಗೂ ಮಜ್ಹಬಿ ಸಿಕ್ಖರಿಗೆ ಪ್ರತ್ಯೇಕಗೊಳಿಸಿ ಆದೇಶ ಹೊರಡಿಸಿದರು.
- 1994 ನವಂಬರ್ 9 ರಂದು ಹರ್ಯಾಣ ಸರ್ಕಾರ ಚಮ್ಮಾರ್ ಉಪಜಾತಿಗಳು ಮತ್ತು ಉಳಿದ 36 ಜಾತಿಗಳ ನಡುವೆ ಪರಿಶಿಷ್ಟ ಜಾತಿಗಳ ಮೀಸಲಾತಿಯನ್ನು ಹಂಚಿಕೆ ಮಾಡಿ ಆದೇಶ ಹೊರಡಿಸಿತು.
- 2000 ಮೇ 31 ರಂದು ಆಂಧ್ರಪ್ರದೇಶದ ಅಂದಿನ ತೆಲುಗುದೇಶಂ ಸರಕಾರ ನ್ಯಾ॥ ರಾಮಚಂದ್ರ ರಾಜು ಆಯೋಗದ ಶಿಫಾರಸ್ಸಿನಂತೆ ಪರಿಶಿಷ್ಟ ಜಾತಿಗಳ ಮೀಸಲಾತಿಯನ್ನು 4 ಗುಂಪಾಗಿ ವಿಂಗಡಿಸಿ ಒಳಮೀಸಲಾತಿಯನ್ನು ಜಾರಿಮಾಡಿತು.
- 2001 ಜೂನ್ 28 ಅಂದಿನ ಉತ್ತರಪ್ರದೇಶದ ಮುಖ್ಯಮಂತ್ರಿ ರಾಜನಾಥ್ ಸಿಂಗ್ ರಚಿಸಿದ್ದ ಹುಕುಂಸಿಂಗ್ ಆಯೋಗ ಚಮ್ಮಾರ್ ಉಪಜಾತಿಗಳಿಗೆ ಶೇ. 10 ಹಾಗೂ ಉಳಿದ ಪರಿಶಿಷ್ಟ ಜಾತಿಗಳಿಗೆ ಶೇ. 11 ರಂತೆ ಮೀಸಲಾತಿಯನ್ನು ವರ್ಗೀಕರಿಸಿ ಶಿಫಾರಸ್ಸು ಮಾಡಿತ್ತು.
- 2003ರಲ್ಲಿ ಮಹಾರಾಷ್ಟ್ರ ಸರಕಾರ ಪರಿಶಿಷ್ಟ ಜಾತಿಗಳಲ್ಲಿನ ಮೀಸಲಾತಿಯ ಅಸಮತೋಲನದ ಬಗ್ಗೆ ಅಧ್ಯಯನ ವರದಿ ನೀಡಲು ನ್ಯಾ॥ ಲಾಹೂಜಿ ಆಯೋಗ ರಚಿಸಿತು.
- 2008 ರಲ್ಲಿ ತಮಿಳುನಾಡಿನ ಅಂದಿನ ಮುಖ್ಯಮಂತ್ರಿ ಕರುಣಾನಿಧಿ ನ್ಯಾ॥ ಎಮ್ ಎಸ್ ಜನಾರ್ಧನಂ ಆಯೋಗದ ಶಿಫಾರಸ್ಸಿನಂತೆ ಶೇ. 18ರ ಪರಿಶಿಷ್ಟ ಜಾತಿಗಳ ಮೀಸಲಾತಿಯಲ್ಲಿ ಅರುಂಧತಿಯಾರ್ ಉಪಜಾತಿಗಳಿಗೆ ಶೇ. 3ರ ಮೀಸಲಾತಿಯನ್ನು ಪ್ರತ್ಯೇಕಿಸಿ ಆದೇಶ ಹೊರಡಿಸಿತು.
- 2009 ಜುಲೈ 28 ಬಿಹಾರದಲ್ಲಿ ಅಂದಿನ ಮುಖ್ಯಮಂತ್ರಿ ನಿತೀಶ್ ಕುಮಾರ್, ವಿಶ್ವನಾಥ್ ರಿಷಿ ನೇತೃತ್ವದ ಮಹಾದಲಿತ ಆಯೋಗದ ಶಿಫಾರಸ್ಸಿನಂತೆ ಸರ್ಕಾರಿ ಸೌಲಭ್ಯಗಳ ವಿತರಣೆಯಲ್ಲಿ ವರ್ಗೀಕರಣ ನೀತಿಯನ್ನು ಜಾರಿಗೆ ತಂದರು.

ಪರಿಶಿಷ್ಟ ಜಾತಿಗಳ ಮೀಸಲಾತಿಯನ್ನು ವರ್ಗೀಕರಣ ಮಾಡುವ ನಿರ್ಧಾರವನ್ನು ಇದೇ 2023ರ ಮಾರ್ಚ್ 28 ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ಕರ್ನಾಟಕ ಸರ್ಕಾರ ತೆಗೆದುಕೊಂಡಿತು. ಈ ನಿರ್ಧಾರ ಆಂಧ್ರಪ್ರದೇಶ, ತೆಲಂಗಾಣ ಸೇರಿದಂತೆ ಅನೇಕ ರಾಜ್ಯಗಳಲ್ಲಿ ದೊಡ್ಡ ಸಂಚಲನ ಮೂಡಿಸಿದೆ.

ಸಚಿವ ಸಂಪುಟದ ನಿರ್ಧಾರದ ಸುದ್ದಿ ಹೊರಬೀಳುತ್ತಿದ್ದಂತೆಯೇ ಕರ್ನಾಟಕದ ಸಾವಿರಾರು ಹಳ್ಳಿಗಳು ಸಂಭ್ರಮಾಚರಣೆಗೆ ಸಾಕ್ಷಿಯಾದವು. ತೆಲಂಗಾಣದ ಒಳ ಮೀಸಲಾತಿ ಹೋರಾಟದ ಅಗ್ರಗಣ್ಯ ನಾಯಕರಾದ ಮಂದಕೃಷ್ಣ ಮಾದಿಗ ಅದೇ ರಾತ್ರಿ ಹೈದರಾಬಾದಿನಿಂದ ಬೆಂಗಳೂರಿಗೆ ಹೊರಟುಬಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರಾದ ಗೋವಿಂದ ಕಾರಜೋಳ, ಕೇಂದ್ರ ಸಚಿವರಾದ ಎ ನಾರಾಯಣಸ್ವಾಮಿ ಅವರನ್ನು ಭೇಟಿಯಾಗಿ ಅಭಿನಂದಿಸಿದರು.

*4ನೇ ಪುಟಕ್ಕೆ...*

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th MAY 2023
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23
FORTNIGHTLY 15-05-2023



*3ನೇ ಪುಟದಿಂದ...*

### ಮುಂದೇನು?

ಈಗ ಕರ್ನಾಟಕ ಸರ್ಕಾರ ಪರಿಶಿಷ್ಟ ಜಾತಿಗಳ ಶೇ 17 ರ ಮೀಸಲಾತಿಯನ್ನು ವರ್ಗೀಕರಿಸಿ ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಿದೆ. ಈ ವಿಷಯದಲ್ಲಿ ಕೇಂದ್ರ ಸರ್ಕಾರವೇ ನಿರ್ಧಾರ ತೆಗೆದುಕೊಳ್ಳಬೇಕು.

### ಎರಡು ಸಾಧ್ಯತೆಗಳು

1. ನ್ಯಾ॥ ಉಷಾ ಮೆಹ್ರಾ ಆಯೋಗದ ಶಿಫಾರಸ್ಸಿನಂತೆ ಸಂವಿಧಾನದ 341 ವಿಧಿಗೆ ಸಂಸತ್ತಿನಲ್ಲಿ ತಿದ್ದುಪಡಿ ತಂದು ವರ್ಗೀಕರಣದ ವಿಷಯದಲ್ಲಿ ರಾಜ್ಯಗಳಿಗೆ ಅಧಿಕಾರ ಕೊಡುವುದು.
2. ನ್ಯಾ॥ ಅರುಣ್ ಮಿಶ್ರಾ ನೇತೃತ್ವದ ಐವರು ಸದಸ್ಯರ ಪೀಠ ಒಳ ಮೀಸಲಾತಿಯ ಪರವಾಗಿ ಕೊಟ್ಟಿರುವ ತೀರ್ಪನ್ನು 7 ಅಥವಾ 9 ಸದಸ್ಯರ ಪೀಠಕ್ಕೆ ತಂದು ನ್ಯಾಯಾಂಗ ಪ್ರಕ್ರಿಯೆಯನ್ನು ಚುರುಕುಗೊಳಿಸುವುದು.

ಬಿಜೆಪಿಯ ಮೂಲಸ್ವರೂಪವಾದ ಜನಸಂಘದ ಸ್ಥಾಪಕರಲ್ಲಿ ಒಬ್ಬರಾದ ದೀನದಯಾಳ್ ಉಪಾಧ್ಯಾಯ 'ಅಂತ್ಯೋದಯ'ದಿಂದಲೇ ಸಾಮಾಜಿಕ ನ್ಯಾಯ ಸಾಕಾರ ಸಾಧ್ಯ ಎಂದು ಪ್ರತಿಪಾದಿಸಿದ್ದರು. **ಒಳಮೀಸಲಾತಿ ನಿಜಾರ್ಥದಲ್ಲಿ ಅಂತ್ಯೋದಯವೇ ಆಗಿದೆ.** ಅಂತ್ಯೋದಯವೇ ಸರ್ವೋದಯದ ಮೊದಲ ಮೆಟ್ಟಿಲು ಸಾಮಾಜಿಕ ಸಾಮರಸ್ಯದ ಅಡಿಗಲ್ಲು.

ನ್ಯಾ॥ ಅರುಣ್ ಮಿಶ್ರಾ ನೇತೃತ್ವದ ನ್ಯಾಯಪೀಠ ಗ್ರಹಿಸಿದಂತೆಯೇ ಕರ್ನಾಟಕದ ಬಿಜೆಪಿ ಸರ್ಕಾರ ಹೊಣೆಯರಿತು, ಸ್ವಪ್ರೇರಿತವಾಗಿ ಕಾರ್ಯನಿರ್ವಹಿಸಿದೆ. ಸಾಮಾಜಿಕ ನ್ಯಾಯವನ್ನು ಅಂಚಿನ ಜನರಿಗೆ ತಲುಪಿಸುವ ದಿಟ್ಟ ಹೆಜ್ಜೆ ಇಟ್ಟಿದೆ.

> **"ಬುಟ್ಟಿಯೊಳಗಿನ ಹಣ್ಣುಗಳು ಹಸಿದವರಿಗೆ, ದುರ್ಬಲರಿಗೆ ಸಿಗದೆ ತಾಕತ್ತಿದ್ದವರ ಪಾಲಾಗುವುದನ್ನು ನೋಡಿ ಸುಮ್ಮನಿರಲಾಗದು. ಇಂತಹ ಸಾಮಾಜಿಕ ವಾಸ್ತವಗಳನ್ನು 'ಏಕಸ್ವರೂಪದ ಸಮುದಾಯ'ದಡಿಯಲ್ಲಿ ಮುಚ್ಚಿಡಲಾಗದು. ಮೀಸಲಾತಿಯ ನ್ಯಾಯಯುತ ಹಂಚಿಕೆ ಸಾಮಾಜಿಕ ನ್ಯಾಯದ ಭಾಗವೇ ಆಗಿದೆ. ಅಸಮಾನತೆಯ ನಿವಾರಣೆಯ ವಿಷಯದಲ್ಲಿ ರಾಜ್ಯಗಳನ್ನು ಇನ್ನು ಹೆಚ್ಚು ಹೊಣೆಗಾರರನ್ನಾಗಿಸಬೇಕು. ರಾಜ್ಯಗಳಿಂದ ಬರುವ ಸ್ವಪ್ರೇರಿತ ಕ್ರಮಗಳು ಗುರಿಸಾಧಿಸಲು ಪೂರಕವಾಗಬೇಕು. ಬದಲಾಗುತ್ತಿರುವ ವಾಸ್ತವವನ್ನು ಪರಿಗಣಿಸಿ, ಸಂವಿಧಾನವನ್ನು ಮರು ಅರ್ಥೈಸಿಕೊಂಡು ಸಾಮಾಜಿಕ ನ್ಯಾಯದ ಗುರಿ ಸಾಧಿಸಬೇಕು."**
>
> **ನ್ಯಾ। ಅರುಣ್ ಮಿಶ್ರಾ ನೇತೃತ್ವದ ಐವರು ಸದಸ್ಯರ ನ್ಯಾಯಪೀಠ ನೀಡಿದ ತೀರ್ಪು**
> **2020 ಆಗಸ್ಟ್ 27**

## ಒಳಮೀಸಲಾತಿಯ ಕುರಿತು ಎರಡು ಭಿನ್ನ ತೀರ್ಪುಗಳು

**ತೀರ್ಪು–1 :** 2001 ರಲ್ಲಿ ಆಂಧ್ರಪ್ರದೇಶದ ಸರಕಾರ ಒಳಮೀಸಲಾತಿಯನ್ನು ಜಾರಿಮಾಡಿದ್ದು ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲೇರಿತು.

ನ್ಯಾ॥ ಸಂತೋಷ್ ಹೆಗ್ಡೆ ನೇತೃತ್ವದ ಸರ್ವೋಚ್ಚ ನ್ಯಾಯಾಲಯದ ಐವರು ಸದಸ್ಯರ ನ್ಯಾಯಪೀಠದ ತೀರ್ಪಿನ ಗ್ರಹಿಕೆಗಳು –

**5 ಮೇ 2004:** ಸಂಸತ್ತಿನ ಅನುಮೋದನೆ ಇಲ್ಲದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜಾತಿಪಟ್ಟಿಯಲ್ಲಿ ಯಾವ ಮಾರ್ಪಾಡನ್ನು ಮಾಡಲಾಗದು. ಸಂವಿಧಾನದಲ್ಲಿ ಪರಿಶಿಷ್ಟ ಜಾತಿ, ಪಂಗಡಗಳನ್ನು ಮಾರ್ಪಾಡು ಮಾಡುವ, ವಿಂಗಡಿಸುವ ಅಧಿಕಾರ ರಾಜ್ಯಗಳಿಗೆ ಇಲ್ಲ. ಪರಿಶಿಷ್ಟ ಜಾತಿಗಳು ಅನ್ನುವುದು ಒಂದು ವರ್ಗ, ಅದೊಂದು ಏಕಸ್ವರೂಪಿ ಸಮುದಾಯ. ಹೀಗಾಗಿ ಅದನ್ನು ಗುಂಪುಗಳನ್ನಾಗಿ ವಿಂಗಡಿಸಲಾಗದು. ಆದರೆ ಒಳಮೀಸಲಾತಿ ಬೇಡಿಕೆಯ ಗಂಭೀರತೆ ಬಗ್ಗೆ ನ್ಯಾಯಪೀಠಕ್ಕೆ ಸಹಾನುಭೂತಿಯೂ ಇದೆ. ಬದಲಾದ ಕಾಲ ಮತ್ತು ಸಾಮಾಜಿಕ ಅಗತ್ಯಗಳ ಅನುಗುಣವಾಗಿ ಸಂವಿಧಾನದ ವಿಧಿಗಳನ್ನು ಉದಾರವಾಗಿ ಅರ್ಥೈಸಿಕೊಳ್ಳಬೇಕು.

ಸರ್ವೋಚ್ಚ ನ್ಯಾಯಾಲಯದ ಈ ತೀರ್ಪಿನಿಂದಾಗಿ ಆಂಧ್ರಪ್ರದೇಶ ಸರಕಾರದ ಒಳಮೀಸಲಾತಿಯನ್ನು ಜಾರಿಮಾಡುವ ತೀರ್ಮಾನಕ್ಕೆ ತಡೆ ಉಂಟಾಯಿತು. ಮಾತ್ರವಲ್ಲ 1975 ರಿಂದ ಪಂಜಾಬಿನಲ್ಲಿ, 1992 ರಿಂದ ಹರ್ಯಾಣದಲ್ಲಿ ಜಾರಿಯಲ್ಲಿದ್ದ ಒಳಮೀಸಲಾತಿಯೂ ಬಿದ್ದು ಹೋಯಿತು.

**ತೀರ್ಪು–2:** ಪಂಜಾಬ್‌ನಲ್ಲಿ ರದ್ದಾದ ಒಳಮೀಸಲಾತಿಯ ವಿಷಯ ಮತ್ತೆ ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದಿತು.

ನ್ಯಾ ಅರುಣ್ ಮಿಶ್ರಾ ನೇತೃತ್ವದ ಐವರು ಸದಸ್ಯರ ನ್ಯಾಯಪೀಠ ನೀಡಿದ ತೀರ್ಪು

**2020 ಆಗಸ್ಟ್ 27 :** ಒಳಮೀಸಲಾತಿ – ಮೀಸಲಾತಿಯ ಮೂಲ ಆಶಯದ ವಿಸ್ತರಣೆಯೇ ಆಗಿದೆ. ಒಳಮೀಸಲಾತಿ ಪರಿಶಿಷ್ಟ ಜಾತಿಗಳ ಪಟ್ಟಿಯನ್ನು ಏರುಪೇರು ಮಾಡುವುದಿಲ್ಲ, ಪರಿಶಿಷ್ಟ ಜಾತಿಗಳ ಪಟ್ಟಿಯನ್ನು ಗುಂಪಾಗಿ ವಿಂಗಡಿಸುವ ಪ್ರಕ್ರಿಯೆಯಲ್ಲಿ ಯಾವ ಜಾತಿಯನ್ನೂ ತೆಗೆಯುವ ಅಥವಾ ಸೇರಿಸುವ ಪ್ರಶ್ನೆ ಬರುವುದಿಲ್ಲ.

ಪರಿಶಿಷ್ಟ ಜಾತಿಗಳ ಪಟ್ಟಿಯು ಏಕಸ್ವರೂಪದ್ದಲ್ಲ ಎಂದು ಅನೇಕ ರಾಜ್ಯಗಳಲ್ಲಿ ನಡೆದ ಕುಲಶಾಸ್ತ್ರೀಯ ಅಧ್ಯಯನಗಳು, ನ್ಯಾಯಿಕ ಆಯೋಗಗಳ ದಾಖಲೆಗಳು ಸ್ಪಷ್ಟವಾಗಿ ಹೇಳಿವೆ. ಪರಿಶಿಷ್ಟ ಜಾತಿಗಳನ್ನು ಏಕಸ್ವರೂಪದ ಗುಂಪೆಂದು ಸ್ವೀಕರಿಸಿ ಒಳಮೀಸಲಾತಿಯನ್ನು ನಿರಾಕರಿಸುವುದರಿಂದ ಅಸಮಾನತೆಯನ್ನು ಪೋಷಿಸಿದಂತಾಗುತ್ತದೆ. ನಿಕೃಷ್ಟ ಜಾತಿ, ಉದ್ಯೋಗಹೀನತೆ, ಬಡತನ – ಈ ಮೂರರ ಬಾಣಲೆಯೊಳಗೆ ಸಿಲುಕಿದವರನ್ನು ಹುರಿದು ಮುಕ್ಕಲಾಗುತ್ತಿದೆ. ಪೌರಕಾರ್ಮಿಕರು, ಸ್ವಚ್ಛತಾಕರ್ಮಿಗಳು, ಹಾದಿಬದಿಯ ಚರ್ಮಕಾರರು, ಅಸ್ತಿತ್ವ ಇಲ್ಲದ ಅಲೆಮಾರಿಗಳ 'ಹುರಿದು ಮುಕ್ಕಿದ ಬದುಕು' ಮೀಸಲಾತಿಯೊಳಗಿನ ಅಸಮಾನ ಸ್ಪರ್ಧೆಯನ್ನು ನಿಚ್ಚಳಗೊಳಿಸಿದೆ. ಮೀಸಲಾತಿಯ ನ್ಯಾಯಯುತ ಹಂಚಿಕೆ ಈ ಅಸಮಾನರ ಸ್ಪರ್ಧೆಯನ್ನು ಸರಿಪಡಿಸಬಲ್ಲದು.

ಬುಟ್ಟಿಯೊಳಗಿನ ಹಣ್ಣುಗಳು ಹಸಿದವರಿಗೆ, ದುರ್ಬಲರಿಗೆ ಸಿಗದೆ ತಾಕತ್ತಿದ್ದವರ ಪಾಲಾಗುವುದನ್ನು ನೋಡಿ ಸುಮ್ಮನಿರಲಾಗದು. ಇಂತಹ ಸಾಮಾಜಿಕ ವಾಸ್ತವಗಳನ್ನು 'ಏಕಸ್ವರೂಪದ ಸಮುದಾಯ'ದಡಿಯಲ್ಲಿ ಮುಚ್ಚಿಡಲಾಗದು. ಮೀಸಲಾತಿಯ ನ್ಯಾಯಯುತ ಹಂಚಿಕೆ ಸಾಮಾಜಿಕ ನ್ಯಾಯದ ಭಾಗವೇ ಆಗಿದೆ. ಅಸಮಾನತೆಯ ನಿವಾರಣೆಯ ವಿಷಯದಲ್ಲಿ ರಾಜ್ಯಗಳನ್ನು ಇನ್ನು ಹೆಚ್ಚು ಹೊಣೆಗಾರರನ್ನಾಗಿಸಬೇಕು. ರಾಜ್ಯಗಳಿಂದ ಬರುವ ಸ್ವಪ್ರೇರಿತ ಕ್ರಮಗಳು ಗುರಿಸಾಧಿಸಲು ಪೂರಕವಾಗಬೇಕು. ಬದಲಾಗುತ್ತಿರುವ ವಾಸ್ತವವನ್ನು ಪರಿಗಣಿಸಿ, ಸಂವಿಧಾನವನ್ನು ಮರು ಅರ್ಥೈಸಿಕೊಂಡು ಸಾಮಾಜಿಕ ನ್ಯಾಯದ ಗುರಿ ಸಾಧಿಸಬೇಕು.

ಐವರು ಸದಸ್ಯರ ನ್ಯಾಯಪೀಠವಾದ ನಮಗೆ ಮತ್ತೊಂದು ಐವರು ಸದಸ್ಯರ ನ್ಯಾಯಪೀಠದ ತೀರ್ಪನ್ನು ಪರಿಶೀಲಿಸಲಾಗದು. ಹೀಗಾಗಿ ಸರ್ವೋಚ್ಚ ನ್ಯಾಯಾಲಯ ಏಳು ಅಥವಾ ಅದಕ್ಕೂ ಹೆಚ್ಚಿನ ಸದಸ್ಯರ ನ್ಯಾಯಪೀಠದಲ್ಲಿ ಪುನರ್ ಪರಿಶೀಲಿಸಬೇಕು.



### ಮುಸ್ಲಿಂ ಮೀಸಲಾತಿ – ಓಲೈಕೆ ರಾಜಕಾರಣ

ಕರ್ನಾಟಕದ ಒಬಿಸಿ ಮೀಸಲಾತಿಯಲ್ಲಿ 2B ಪ್ರವರ್ಗದಲ್ಲಿ ಇಡೀ ಮುಸ್ಲಿಂ ಸಮುದಾಯಕ್ಕೆ ಪ್ರತ್ಯೇಕ 4% ಮೀಸಲಾತಿ ನೀಡಲಾಗಿತ್ತು. ಇದು ಜಾರಿಗೆ ಬಂದಿದ್ದು 1994 ರಲ್ಲಿ.

ಯಾವುದೇ ಸಾಂವಿಧಾನಿಕ ಮಾನ್ಯತೆ ಇಲ್ಲದಿದ್ದರೂ ಈ ಮೀಸಲಾತಿಯನ್ನು ಕರ್ನಾಟಕದಲ್ಲಿ ಮುಸ್ಲಿಮರು ನಿರಾತಂಕವಾಗಿ ಕಳೆದ 30 ವರ್ಷದಿಂದ ಅನುಭವಿಸಿಕೊಂಡು ಬರುತ್ತಿದ್ದರು. ಇದೀಗ ಬಿಜೆಪಿ ಸರಕಾರ 2B ಪ್ರವರ್ಗವನ್ನು ರದ್ದು ಮಾಡುವ ದಿಟ್ಟ ನಿರ್ಧಾರ ತೆಗೆದುಕೊಂಡಿದೆ.

- 1953 ರಲ್ಲಿ ಕೇಂದ್ರ ಸರಕಾರ ರಚಿಸಿದ್ದ ಕಾಕಾ ಕಾಲೇಲ್ಕರ್ ನೇತೃತ್ವದ ಹಿಂದುಳಿದ ಆಯೋಗ ಮುಸ್ಲಿಂ ಸಮಾಜವನ್ನು ಇಡಿಯಾಗಿ ಹಿಂದುಳಿದ ವರ್ಗ ಎಂದು ಒಪ್ಪಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಿತ್ತು.
- 1982 ರಲ್ಲಿ ಕೇಂದ್ರ ಸರ್ಕಾರಕ್ಕೆ ವರದಿಕೊಟ್ಟ ಮಂಡಲ್ ಆಯೋಗ ಮುಸ್ಲಿಮರಲ್ಲಿ 82 ಉಪಜಾತಿಗಳನ್ನು ಹಿಂದುಳಿದವರ ಪಟ್ಟಿಗೆ ಗುರುತಿಸಿತ್ತು. ಇಡೀ ಮುಸ್ಲಿಂ ಸಮುದಾಯವನ್ನು ಒಬಿಸಿ ಎಂದು ಗುರುತಿಸಲು ಸಾಧ್ಯವಿಲ್ಲ ಎಂದು ಮಂಡಲ್ ಆಯೋಗ ಸ್ಪಷ್ಟವಾಗಿ ಹೇಳಿತ್ತು.
- ಈಗಲೂ ಕೇಂದ್ರ ಸರ್ಕಾರದ ಒಬಿಸಿ ಮೀಸಲಾತಿಯಲ್ಲಿ ಎಲ್ಲಾ ಮುಸ್ಲೀಮರನ್ನು ಸೇರಿಸಿಲ್ಲ. ಕೇಂದ್ರ ಸರಕಾರ, ಉಳಿದೆಲ್ಲ ರಾಜ್ಯಗಳಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿ ಇರುವುದೇ ಶೇ 27. ಕರ್ನಾಟಕದಲ್ಲಿ ಮುಸ್ಲೀಮರಿಗೆ ಪ್ರತ್ಯೇಕ ಮೀಸಲಾತಿ ಕೊಟ್ಟಿದ್ದರಿಂದಲೇ ನಮ್ಮಲ್ಲಿ ಒಬಿಸಿ ಮೀಸಲಾತಿ 32 ಕ್ಕೆ ಏರಿದೆ.
- ಕರ್ನಾಟಕದಲ್ಲಿ ಒಬಿಸಿ ಚಹರೆಯ ಮುಸ್ಲಿಂ ಜಾತಿಗಳು – ಪಿಂಜಾರ, ನದಾಫ್, ಲದಾಫ್, ಕಸಬ್, ಕಸಾಯಿ, ಒಟಾರಿ, ನಾಲಬಂದ್, ಬಾಜಿಗಾರ್, ಜೋಹರಿ, ಫುಲ್ ಮಾಲಿ, ಚಪ್ಪರಬಂದ್, ದರ್ವೇಶಿ ಇತ್ಯಾದಿ 20ಕ್ಕೂ ಹೆಚ್ಚು ಜಾತಿಗಳು ಪ್ರವರ್ಗ–1 ಮತ್ತು 2A ನಲ್ಲಿ ಮೀಸಲಾತಿ ಪಡೆಯುತ್ತಿವೆ.
- 2B ಮೀಸಲಾತಿಯನ್ನು ಸರ್ಕಾರ ರದ್ದು ಮಾಡಿದ ತರುವಾಯವೂ ಪ್ರವರ್ಗ–1 ಮತ್ತು 2A ನಲ್ಲಿ ಇರುವ ನೈಜ ಹಿಂದುಳಿದ ಮುಸ್ಲಿಂ ಜಾತಿಗಳಿಗೆ ಮೀಸಲಾತಿ ಮುಂದುವರಿಯುತ್ತಿದೆ.
- 2005ರಲ್ಲಿ ಅಂದಿನ ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿದ್ದ ರಾಜಶೇಖರ ರೆಡ್ಡಿ ಓಲೈಕೆ ರಾಜಕಾರಣದ ಬಲೆಗೆ ಬಿದ್ದು ಮುಸ್ಲಿಮರಿಗೆ 4% ಪ್ರತ್ಯೇಕ ಮೀಸಲಾತಿ ಘೋಷಿಸಿದ್ದರು. ಆದರೆ ಆಂಧ್ರಪ್ರದೇಶದ ಹೈಕೋರ್ಟಿನ ಐವರು ನ್ಯಾಯಾಧೀಶರ ಪೀಠ ಮುಸ್ಲಿಮ್ ಪ್ರತ್ಯೇಕ ಮೀಸಲಾತಿಯನ್ನು ರದ್ದುಗೊಳಿಸಿತು.
- ಕರ್ನಾಟಕ ಸರ್ಕಾರ ಪ್ರವರ್ಗ–1 ರಲ್ಲಿ ಬರುವ 15 ಹಿಂದುಳಿದ ಮುಸ್ಲಿಂ ಸಮುದಾಯಗಳನ್ನು ಗುರುತಿಸಿ ಅವರಿಗೆ ನದಾಫ್ – ಪಿಂಜಾರ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿದೆ.
- 23 ಲಕ್ಷದಷ್ಟು ಜನಸಂಖ್ಯೆ ಇರುವ ಪಿಂಜಾರರು ಮುಸ್ಲಿಮರಲ್ಲೇ ಅತ್ಯಂತ ನಿರ್ಲಕ್ಷಿತ ಸಮುದಾಯ. ಚಿತ್ರದುರ್ಗ, ದಾವಣಗೆರೆ, ಹಾವೇರಿ, ಗದಗ, ಧಾರವಾಡ, ಬಾಗಲಕೋಟೆ, ವಿಜಯಪುರ, ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯನಗರ ಜಿಲ್ಲೆಗಳಲ್ಲಿ ಹರಡಿಕೊಂಡಿರುವ ಪಿಂಜಾರರು ಶ್ರಮಜೀವಿಗಳು. ಗ್ರಾಮೀಣ ಪ್ರದೇಶಗಳಲ್ಲಿ ಸಂಚರಿಸುತ್ತ ಹಾಸಿಗೆ, ದಿಂಬು ಹೊಲೆಯುವ ಕಾಯಕ ನಡೆಸುವವರು. ಮುಖ್ಯಧಾರೆಯ ಮುಸ್ಲಿಂ ಜಾತಿಗಳ ನಡುವೆ ಸ್ಪರ್ಧಿಸಲಾಗದೆ, ಧ್ವನಿಯೂ ಇಲ್ಲದೆ ಬಳಲಿದ್ದ ಪಿಂಜಾರ ಮತ್ತಿತರ ಸಮುದಾಯಗಳಿಗೆ ಪ್ರತ್ಯೇಕ ಅಭಿವೃದ್ಧಿ ನಿಗಮ ರಚಿಸಿರುವುದನ್ನು ಆ ಸಮುದಾಯದ ಜನತೆ ಸ್ವಾಗತಿಸಿದ್ದಾರೆ.
- ಮುಸ್ಲಿಮರು ಈ ದೇಶವನ್ನು 800 ವರ್ಷಗಳ ಕಾಲ ಆಳಿದವರು. ತಮ್ಮ ಬಾಹುಳ್ಯದ ಪ್ರದೇಶಗಳನ್ನು ಭಾರತದೊಳಗೆ ಉಳಿಯಲು ಬಿಡದೆ ಪ್ರತ್ಯೇಕ ದೇಶ ಕಟ್ಟಿಕೊಂಡವರು. ದೇಶವಾಳಿದ ಮುಸ್ಲಿಮರನ್ನು ಇಡಿಯಾಗಿ 'ಹಿಂದುಳಿದ ವರ್ಗ' ಎಂದು ಘೋಷಿಸುವುದರ ಹಿಂದೆ ಓಟ್ ಬ್ಯಾಂಕ್ ರಾಜಕಾರಣ ಬಿಟ್ಟರೆ ಮತ್ಯಾವ ಹಿತಾಸಕ್ತಿಯೂ ಇಲ್ಲ.
- 2B ರದ್ದು ಮಾಡಿದ್ದರಿಂದ ಉಳಿದ 4% ಮೀಸಲಾತಿಯನ್ನು ರೈತಾಪಿ ವರ್ಗಗಳಾದ ಒಕ್ಕಲಿಗರೂ, ಲಿಂಗಾಯತರು ಇರುವ ಗುಂಪಿಗೆ ಸಮನಾಗಿ ಹಂಚಲಾಗಿದೆ. ಹೀಗಾಗಿ ಒಕ್ಕಲಿಗರಿರುವ 2C ಗುಂಪಿಗೆ ಶೇ 4+2 ಮತ್ತು ಲಿಂಗಾಯತರಿರುವ 2D ಗುಂಪಿಗೆ ಶೇ 5+2 ಮೀಸಲಾತಿ ಸಿಕ್ಕಿದೆ.

ಇದು ಕಷ್ಟದಲ್ಲಿರುವ ರೈತಾಪಿ ಸಮುದಾಯಗಳಿಗೆ ಹೆಚ್ಚಿನ ಅವಕಾಶ ಒದಗಿಸಿದೆ ಮಾತ್ರವಲ್ಲ, ಲಿಂಗಾಯತ ಸಮುದಾಯವನ್ನು ಒಡೆಯುವ ಶಕ್ತಿಗಳನ್ನು ನಿಶಸ್ತ್ರಗೊಳಿಸಿದೆ.

ಕರ್ನಾಟಕದಲ್ಲಿ ಒಳಮೀಸಲಾತಿಯು ನಿಜಾರ್ಥದಲ್ಲಿ ಅಂತ್ಯೋದಯವೇ ಆಗಿದ್ದು ಸಾಮಾಜಿಕ ನ್ಯಾಯದ ಗುರಿ ಸಾಧಿಸಲು ಸಹಕಾರಿಯಾಗಿದೆ.

**ಓದುಗರೇ ಗಮನಿಸಿ**
**ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:**
**ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021**

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.